ನವಸಾಕ್ಷರ ಪುಸ್ತಕ ಮಾಲೆ ೧೦೩

ತೆನಾಲಿ ರಾಮನ ಕಥೆಗಳು

ವಿಠಲರಾವ್ ಟಿ. ಗಾಯಕವಾಡ



8K3.6
VITe

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

016220
8K3.6
VIT t

TENALI RAMANA KATHEGALU : By Vittala Rao T. Gaikwad. Published by The Director of Prasaranga, Kannada University, Hampi - 583 211, KARNATAKA.
First Impression 1994, Pp.ii + 26, Rs. 8.00.

© Kannada University 1994

ಸಂಯೋಜನಾಧಿಕಾರಿ
ಡಾ.ಎಚ್.ಎಸ್.ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ — ೫೮೩ ೨೧೧

ಮುಖಪುಟ ವಿನ್ಯಾಸ
ಕೆ.ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು — ೫೬೦ ೦೦೪.

ಗ್ರಂಥಾಲಯ ಅಗಿದೆ

ತೆನಾಲಿ ರಾಮನ ಕತೆಗಳು

"ನಗುವು ಸಹಜದ ಧರ್ಮ

ನಗಿಸುವುದು ಪರಧರ್ಮ

ನಕ್ಕು ನಗಿಸುವುದು ಅತಿಶಯದ ಧರ್ಮ"

ನಗುವುದು ಮನುಷ್ಯನ ಸಹಜ ಸ್ವಭಾವ. ಮನುಷ್ಯನ ಬದುಕಿನಲ್ಲಿ ನಗುವಿಗಿಂತ ಅಳುವೇ ಹೆಚ್ಚು. ಆದರೆ ಆ ಅಳುವಿನಲ್ಲೂ ಸಂಕಟವನ್ನು ಗೆಲ್ಲಬೇಕಾದರೆ ನಗುವನ್ನು ಹುಡುಕಿ ಬದುಕುವುದು ಅವಶ್ಯಕ. ನಗುವಿನಲ್ಲಿ ಹಾಸ್ಯ ಮಾಡಿ ನಗುವುದು ಒಂದು ಬಗೆ. ಒಳ್ಳೆಯ ಹಾಸ್ಯ ಎಂದರೆ ಮನುಷ್ಯಸಮಾಜವನ್ನು ತಿದ್ದುವಂಥದು. ಅಲ್ಲಿ ತಾನು ಮೇಲು, ಉಳಿದವರು ಕೀಳು ಎಂಬ ಭಾವನೆ ಇರುವುದಿಲ್ಲ. ಬದಲಾಗಿ ತನ್ನನ್ನೂ ಸೇರಿಸಿಕೊಂಡಂತೆ ಎಲ್ಲರ ಕೆಟ್ಟಗುಣಗಳನ್ನು ಹಾಸ್ಯ ಮಾಡಿ ಟೀಕಿಸುವುದು, ಹಾಗೆ ಟೀಕಿಸಿ ಸಮಾಜವನ್ನು ಒಳ್ಳೆಯ ಮಾರ್ಗದಲ್ಲಿ ನಡೆಸುವುದೂ ಆಗಿದೆ. ಇಂತಹ ಉದ್ದೇಶದಿಂದ ಹಾಸ್ಯ ಮಾಡುವವರೇ ನಿಜವಾದ ನಗೆಗಾರರು.

ನಗೆಗಾರರನ್ನು ವಿದೂಷಕರು, ವಿಡಂಬಕರು ಎಂದೂ ಕರೆಯುತ್ತಾರೆ. ಅವರ ಹಾಸ್ಯದ ಮಾತು ಚಾಟಿ ಏಟಿನಂತೆ ಚುರುಕು. ಹಾಸ್ಯದ ಕೈಗೆ ಸಿಕ್ಕ ವಸ್ತು, ವ್ಯಕ್ತಿ, ಸಮಾಜ ಮೆತ್ತಗಾಗದೆ ಹೋಗದು. ಏಕೆಂದರೆ 'ಜಾಣನಿಗೆ ಮಾತಿನ ಪೆಟ್ಟು' ಎಂಬ ಗಾದೆಯಂತೆ ಈ ಹಾಸ್ಯದ ಮಾತಿನ ಪೆಟ್ಟಿಗೆ ಸಿಕ್ಕು ನಗಿಸಿಕೊಳ್ಳುವ ವ್ಯಕ್ತಿ ಅವಮಾನಿತನಾಗುವ ಬದಲು ತನ್ನ ತಪ್ಪನ್ನು ತಿಳಿದುಕೊಳ್ಳುತ್ತಾನೆ. ಈ ನಗೆಗಾರ ತನ್ನನ್ನೂ ಹಾಸ್ಯಕ್ಕೆ ಗುರಿ ಮಾಡಿಕೊಳ್ಳುವುದುಂಟು. ಲೋಕದ ತಪ್ಪನ್ನು ತಿದ್ದುವಂಥ ಧೈರ್ಯ ಇಂಥ ನಗೆಗಾರರಿಗೆ ಮಾತ್ರವೇ ಸಾಧ್ಯ. ಅವರಲ್ಲಿ ನ್ಯಾಯಬುದ್ಧಿ ಮತ್ತು ಕಲಾವಂತಿಕೆ ಜೊತೆಗೂಡಿ ಇರುತ್ತವೆ. ಸಿಟ್ಟು, ಸ್ವಾಭಿಮಾನ, ವಿನೋದಗಳು ಸೇರಿಕೊಂಡು ನಗುವು ಮೂಡುತ್ತದೆ. ಪರಿಹಾಸ್ಯ, ಅಪಹಾಸ್ಯ, ನಿಂದನೆ, ವಿಕಟಹಾಸ್ಯಗಳ ಮೂಲಕ ಆತ ಸತ್ಯವನ್ನು ಹುಡುಕುವ ವೈದ್ಯನಾಗಿರುತ್ತಾನೆ. ಬೀರ್‌ಬಲ್, ಮುಲ್ಲಾ ನಸರುದ್ದೀನ್ ಮತ್ತು ತೆನಾಲಿರಾಮರಂತಹ ಹಾಸ್ಯಗಾರರು ಇತಿಹಾಸದಲ್ಲಿ ಹೆಸರು ಮಾಡಿದರು. ಇಲ್ಲಿ ನಾನು ತೆನಾಲಿ ರಾಮಕೃಷ್ಣನ ಹಾಸ್ಯದ ಪರಿಯನ್ನು ವಿವರಿಸುತ್ತೇನೆ.

ರಾಮಕೃಷ್ಣನ ಬಾಲ್ಯ

ಆಂಧ್ರ ಪ್ರದೇಶದ ತೆನಾಲಿ ಊರಿನವರಾದ ರಾಮಕೃಷ್ಣನ ಮೊದಲ ಹೆಸರು ರಾಮಲಿಂಗಯ್ಯ. ಶೈವಬ್ರಾಹ್ಮಣನಾದ ಅವನಿಗೆ ತಂದೆ ಇರಲಿಲ್ಲ. ತಾಯಿಯೇ ಅವನನ್ನು ಬಹಳ ಪ್ರೀತಿಯಿಂದ ಸಾಕಿದಳು. ಅವಳನ್ನು ದೇವರೆಂದು ಭಾವಿಸಿದ್ದ ಅವನಿಗೆ ತಾಯಿಯ ಮಾತುಗಳೇ ವೇದವಾಕ್ಯವಾಗಿತ್ತು. ಬಾಲ್ಯದಲ್ಲಿ ಅವನಿಗೆ ವಿದ್ಯೆ ಕಲಿಸಲು ಯಾರೂ ಮುಂದೆ ಬರಲಿಲ್ಲ. ಬಹಳ ತುಂಟನಾಗಿದ್ದನು. ತಾಯಿಯು ಗುರುಗಳಲ್ಲಿ ಎಷ್ಟು ಕೇಳಿಕೊಂಡರೂ ಅವರು ಇವನಿಗೆ ಕಲಿಸಲು ಒಪ್ಪಲಿಲ್ಲ. ಕೊನೆಗೆ ಹತ್ತು ಹನ್ನೆರಡು ವರ್ಷದ ಬಾಲಕನಾದ ರಾಮಕೃಷ್ಣನು ತಾನೇ ಗುರುಗಳಲ್ಲಿ ಹೋಗಿ ಬೇಡಿಕೊಂಡನು. ಆದರೂ ಪ್ರಯೋಜನವಾಗಲಿಲ್ಲ. ಹೇಗಾದರೂ ಮಾಡಿ ವಿದ್ಯೆ ಕಲಿಯಬೇಕೆಂದು ದಿನವೂ ಊರಿನ ಶಾಲೆಯ ಮರೆಯಲ್ಲಿ ನಿಂತು ಪಾಠ



ರಾಮಕೃಷ್ಣನಿಗೆ ಕಾಳಿಕಾದೇವಿ ಕಾಣಿಸಿಕೊಂಡಳು

ಕೇಳತೊಡಗಿದನು. ಒಂದು ದಿನ ಹುಡುಗನೊಬ್ಬನು ಅದನ್ನು ನೋಡಿ ಗುರುಗಳಿಗೆ ತಿಳಿಸಿದನು. ಗುರುಗಳು ಬಂದಾಗ ರಾಮಕೃಷ್ಣನು ನಡೆದುದನ್ನೆಲ್ಲ ವಿವರಿಸಿದನು. ಅವನ ಶ್ರದ್ಧೆಯನ್ನು ಮೆಚ್ಚಿದ ಗುರುಗಳು 'ಇನ್ನು ಮುಂದೆ ಹೀಗೆ ಬರಬೇಡ. ನನ್ನನ್ನು ಜಾತಿಯಿಂದ ಬಹಿಷ್ಕರಿಸುತ್ತಾರೆ. ನಿನಗೆ ಒಳ್ಳೆಯದಾಗಲಿ, ನೀನು ಜ್ಞಾನವಂತನಾಗು' ಎಂದು ಹರಸಿದನು. ಅದರಿಂದ ದುಃಖಗೊಂಡ ರಾಮಕೃಷ್ಣನು ಕಾಡಿನಲ್ಲಿ ಹೋಗಿ ಕುಳಿತು ಅಳುತ್ತಿದ್ದನು. ಅದನ್ನು ನೋಡಿದ ಒಬ್ಬ ಸಾಧುವು ಶ್ರದ್ಧೆ, ಆಸಕ್ತಿ ಧೈರ್ಯವಿದ್ದರೆ ಆ ಕಾಳಿಕಾ ದೇವಾಲಯಕ್ಕೆ ಹೋಗು ನಿನಗೆ ಒಳ್ಳೆಯದಾಗುತ್ತದೆ ಎಂದು ಹರಸಿದನು.

ಕಾಳಿಕಾದೇವಿ ಕಾಣಿಸಿದಳು

ಒಂದು ಶುಭದಿನದಂದು ರಾಮಕೃಷ್ಣ ಆ ದೇವಾಲಯಕ್ಕೆ ಬಂದನು. ಕಾಳಿಕಾದೇವಿಯನ್ನು ಪೂಜಿಸಿ 'ಜೈ ಮಹಾಕಾಳಿ, ಸರ್ವಶಕ್ತಿದಾಯಿನಿ' ಎಂದು ಜಯಘೋಷ ಮಾಡಿದನು. ಅನಂತರ ಕಾಳಿಕಾಮಂತ್ರವನ್ನು ಹೇಳತೊಡಗಿದನು. ಆಗ ಅವನ ಮೇಲೆ ಹಾವು ಹರಿದಾಡಿದರೂ ಅವನಿಗೆ ಅದರ ಪರಿವೆ ಇರಲಿಲ್ಲ. ಹೀಗೆ ಮೂರು ಕೋಟಿ ಬಾರಿ ಮಂತ್ರ ಹೇಳಿದಾಗ ಸಾವಿರ ಮುಖಗಳ ಭಯಂಕರ ರೂಪದ ಕಾಳಿಕಾದೇವಿ ಕಾಣಿಸಿಕೊಂಡಳು. ರಾಮಕೃಷ್ಣ ಅವಳ ಭೀಕರ ರೂಪಕ್ಕೆ ಹೆದರದೆ ನಗಲಾರಂಭಿಸಿದನು. ಅದೇಕೆಂದು ಕೇಳಲು, "ಜನನಿ ನಿನ್ನ ರೂಪ ಹಾಗೂ ಎರಡೇ ಕೈಗಳನ್ನು ನೋಡಿ ನಗುಬಂತು. ನಮ್ಮ ಒಂದು ಮೂಗಿಗೆ ನೆಗಡಿಯಾದರೆ ಒರೆಸಿಕೊಳ್ಳಲು ಎರಡು ಕೈಗಳು ಸಾಲದು. ಇನ್ನು ನಿನ್ನ ಸಾವಿರಾರು ಮುಖಗಳಿಗೆ ನೆಗಡಿಯಾದರೆ ಗತಿ ಏನು? ಎಂದು ನೆನೆದು ನಗು ಬಂತು; ಕ್ಷಮಿಸು" ಎಂದು ಬೇಡಿಕೊಂಡನು. ರಾಮಕೃಷ್ಣನ ವಿನೋದಕ್ಕೆ ಮೆಚ್ಚಿದ ಕಾಳಿಕಾದೇವಿ ಸೌಮ್ಯರೂಪದಿಂದ ಕಾಣಿಸಿಕೊಂಡಳು. 'ಇನ್ನು ಮುಂದೆ ನೀನು ಮಹಾಪಂಡಿತನಾಗಿ, ಒಳ್ಳೆಯ ಹಾಸ್ಯಗಾರನೆನಿಸಿ ಜನರನ್ನು ನಗಿಸು. ಹಂಪಿಯ ರಾಜ ಕೃಷ್ಣದೇವರಾಯನಲ್ಲಿಗೆ ಹೋಗು. ನಿನಗೆ ರಾಜ ಮನ್ನಣೆ ದೊರೆಯುತ್ತದೆ' ಎಂದು ಹರಸಿದಳು.

ರಾಮಕೃಷ್ಣ ರಾಜನ ಆಶ್ರಯಕ್ಕೆ ಬಂದ

ಕಾಳಿಕಾದೇವಿಯ ಮಾತಿನಂತೆ ರಾಮಕೃಷ್ಣನು ತನ್ನ ತಾಯಿಯೊಂದಿಗೆ ವಿಜಯನಗರಕ್ಕೆ ಬಂದನು. ಅರಮನೆಯ ಒಳಗೆ ಹೋಗುವ ಅವಕಾಶಕ್ಕಾಗಿ ಕಾಯುತ್ತಿದ್ದನು. ಒಮ್ಮೆ ಒಂದು ಸರ್ಕಸ್ ಕಂಪನಿಯವರು ಅರಮನೆಗೆ



ಸರ್ಕಸ್ ಕಂಪನಿಯವನ ವೇಷದಲ್ಲಿ ರಾಮಕೃಷ್ಣ

ಹೋಗುತ್ತಿದ್ದರು. ಅದನ್ನು ನೋಡಿದ ಅವನು ಬೇಗನೆ ಮನೆಗೆ ಬಂದು ಡಬ್ಬದ ಎರಡೂ ಕಡೆ ಹಾಳೆ ಹಚ್ಚಿ ಡೋಲಿನಂತೆ ಮಾಡಿದನು. ಸರ್ಕಸ್‌ನವರಂತೆ ವೇಷಧರಿಸಿ ಅವಸರವಸರವಾಗಿ ಅರಮನೆಯ ಬಳಿಗೆ ಬಂದನು. ಬಾಗಿಲಿನಲ್ಲಿದ್ದ ರಾಜಸೇವಕ ಅವನನ್ನು ತಡೆದು "ಯಾರು ನೀನು? ಎಲ್ಲಿಗೆ ಹೋಗಬೇಕು? ನಡೆಯಾಚೆ" ಎಂದು ಗದರಿಸಿದನು. ರಾಮಕೃಷ್ಣನು 'ಅಯ್ಯಾ, ನಾನು ಆ ಸರ್ಕಸ್ ಸಂಸ್ಥೆಯವನು. ರಾಜನೆದುರು ಚಮತ್ಕಾರದ ಆಟ ತೋರಿಸುವುದಿದೆ. ನನ್ನ ವಿನೋದದಿಂದ ರಾಜನನ್ನು ನಗಿಸಿ ಬಂದ ಬಹುಮಾನದಲ್ಲಿ ನಿನಗರ್ಧ ಕೊಡುವೆನು' ಎಂದನು. ಹಾಗೆಯೇ ಮತ್ತೊಬ್ಬನಿಗೂ ಹೇಳಿ ರಾಜಾಸ್ಥಾನಕ್ಕೆ ಬಂದನು.

ಸರ್ಕಸ್‌ಕಂಪನಿಯವರ ಆಟ ಸಭಿಕರಿಗೆ ಬೇಸರತಂದಿತ್ತು. ಸಭಿಕರು ನಿದ್ರಿಸುತ್ತಿದ್ದುದನ್ನು ರಾಮಕೃಷ್ಣನು ನೋಡಿದನು. ಇದೇ ಸಮಯವೆಂದು ಸರ್ಕಸ್ ಹುಡುಗನಿಗೆ ಬಲವಾಗಿ ಹೊಡೆದನು. ತನ್ನ ವಿನೋದದ ಆಟದಿಂದ ಸಭಿಕರನ್ನು ನಗಿಸತೊಡಗಿದನು. ಹೀಗೆಯೇ ಹಾಡುತ್ತಾ ಆ ಹುಡುಗನನ್ನು ಮತ್ತೆ ಮತ್ತೆ ಹೊಡೆಯತೊಡಗಿದನು. ಸರ್ಕಸ್ಸಿನವರೆಲ್ಲ ರಾಮಕೃಷ್ಣನ ಕಾಲಿಗೆ ಬಿದ್ದು ನೀನೇ ನಮ್ಮ ಗುರುವೆಂದು ಹೇಳಿದರು. ಆಟವೆಲ್ಲ ಮುಗಿದ ಮೇಲೆ ರಾಜನು ರಾಮಕೃಷ್ಣನಿಗೆ ಬಹುಮಾನ ನೀಡುವುದಾಗಿ ಹೇಳಿದನು. ಸರ್ಕಸ್ ಕಂಪನಿಯವರು ಗಾಬರಿಯಾಗಿ 'ರಾಜನ್ ಇವನು ನಮ್ಮವನಲ್ಲ. ನಿಮ್ಮವನೆಂದು ನಾವು ಸುಮ್ಮನಿದ್ದೆವು' ಎಂದರು. ಆಶ್ಚರ್ಯಗೊಂಡ ರಾಜನು 'ನೀನು ಯಾರು' ಎಂದು ಗದರಿಸಿದನು. 'ರಾಜನ್ ನನ್ನ ಹೆಸರು ರಾಮಕೃಷ್ಣ, ನಾನು ಸರ್ಕಸ್‌ನವನಲ್ಲ. ಅವರ ಆಟದಿಂದ ನೀವು ಬೇಸರಗೊಂಡು ನಿದ್ರಿಸುತ್ತಿದ್ದಿರಿ. ಅದಕ್ಕಾಗಿ ನಾನು ವಿನೋದದಾಟ ತೋರಿಸಿದೆನು. ನನ್ನಿಂದ ತಪ್ಪಾಗಿದ್ದರೆ ಕ್ಷಮಿಸಿರಿ' ಎಂದನು. ಸರ್ಕಸ್ ಹುಡುಗನು ರಾಮಕೃಷ್ಣ ನನಗೆ ಬಲವಾಗಿ ಹೊಡೆದನೆಂದು ಹೇಳಿದನು. ಆಗ ರಾಜನು 'ಇವನು ಈ ಹುಡುಗನಿಗೆ ಹೊಡೆದು ನಮ್ಮನ್ನು ನಗಿಸಿದ. ಅವನಿಗೆ ಹೆಚ್ಚಿನ ಬಹುಮಾನವಾಗಿ ನೂರು ಚಾಟಿ ಏಟು ಕೊಡಿ' ಎಂದು ಸೇವಕರಿಗೆ ಹೇಳಿದನು.

ಆಗ ರಾಮಕೃಷ್ಣನು 'ಪ್ರಭುಗಳೇ ನನಗೆ ಕೊಡುವ ಬಹುಮಾನ ಇದೇ ಅಲ್ಲವೆ?' ಎಂದು ಧೈರ್ಯವಾಗಿ ಕೇಳಿದನು. 'ಹೌದು ಇದೇ' ಎಂದು ರಾಜನು ಹೇಳಿದನು. 'ಪ್ರಭುಗಳು ದಯಮಾಡಿ ರಾಜದ್ವಾರ ಮತ್ತು ರಾಜಾಸ್ಥಾನದ ಸೇವಕರನ್ನೂ ಕರೆಸಬೇಕು' ಎನ್ನಲು, ರಾಜನು ಅವರನ್ನು ಕರೆಸಿದನು. ರಾಮಕೃಷ್ಣನು ಅವರಿಗೆ ಬಹುಮಾನದ ಹಂಚಿಕೆಯ ವಿಚಾರವನ್ನು ರಾಜನಿಗೆ ತಿಳಿಸುವಂತೆ ಹೇಳಿದನು. ಅವರು ನಡೆದುದೆಲ್ಲವನ್ನೂ ಹೇಳಿದರು. ಆಗ ರಾಮಕೃಷ್ಣನು 'ಪ್ರಭುಗಳು ಈ ಬಹುಮಾನವನ್ನು ಅವರಿಬ್ಬರಿಗೂ ಅರ್ಧರ್ಧಕೊಡಬೇಕು' ಎಂದು ಬೇಡಿಕೊಂಡನು. ಅವನ ಬುದ್ಧಿವಂತಿಕೆಯ ಹಾಸ್ಯವನ್ನು ಕಂಡ ರಾಜನು ಬೆರಗಾದ. ಅವನನ್ನು ತನ್ನ ಆಸ್ಥಾನದಲ್ಲಿ ವಿದೂಷಕನಾಗಿ ಇಟ್ಟುಕೊಂಡನು. ಲಂಚಕೋರ ಸೇವಕರನ್ನು ಶಿಕ್ಷಿಸಿದನು.

ರಾಮಕೃಷ್ಣನು ರಾಜನಲ್ಲಿ ಕೇವಲ ನಗೆಗಾರನಾಗಿರಲಿಲ್ಲ. ಅನೇಕ ಬಾರಿ ರಾಜನ ತಪ್ಪುಗಳನ್ನೂ ಎತ್ತಿ ತೋರಿಸುತ್ತಿದ್ದನು. ಜಾತಿವಾದಿಗಳು, ಪಂಡಿತರೆಂಬ ಜಂಭದವರುಗಳು ತಮ್ಮ ಅಜ್ಞಾನವನ್ನು ತಿದ್ದಿಕೊಳ್ಳುವಂತೆ ಮಾಡುತ್ತಿದ್ದರು. ರಾಜ್ಯದ ಮರ್ಯಾದೆಗೆ ಭಂಗಬರುವ ಸಮಯದಲ್ಲಿ ಚತುರೋಪಾಯದಿಂದ ಕಾಪಾಡುತ್ತಿದ್ದನು. ರಾಜಾಶ್ರಯದಲ್ಲಿದ್ದರೂ ಹಣದ ದುರಾಶೆಯಿಂದ ಲಂಚಕ್ಕೆ ಆಸೆ ಪಡದೆ ಸರಳವಾಗಿ ಬದುಕುತ್ತ ಎಲ್ಲರಿಗೂ ಬೇಕಾದವನಾಗಿದ್ದನು. ಅವನ ಬಗೆಗಿನ ಕತೆಗಳು ಈ ಅಂಶಗಳನ್ನು ಒಳಗೊಂಡಿವೆ. ಅವುಗಳನ್ನು ಹೀಗೆ ಸಂಗ್ರಹಿಸಿಕೊಟ್ಟಿದ್ದೇನೆ.


ಮಾವಿನ ಮರದ ಸಾಕ್ಷಿ

ಒಂದು ಹಳ್ಳಿಯಲ್ಲಿ ರಾಮಣ್ಣನೆಂಬ ಸಾಚಾ ಮನುಷ್ಯನಿದ್ದನು. ಒಮ್ಮೆ ಅವನಿಗೆ ದೇಶ ಸುತ್ತಿಬರಬೇಕು ಎನಿಸಿತು. ಆದ್ದರಿಂದ ತನ್ನಬಳಿಯಲ್ಲಿದ್ದ ಹಣವನ್ನೆಲ್ಲ ಅದೇ ಊರಿನ ಸಾಹುಕಾರ ಪ್ರೇಮನಾಥನಲ್ಲಿ ಕೊಟ್ಟುಹೋದನು. ಆ ಸಾಹುಕಾರನಿಗೆ ಹಣವನ್ನು ಕಂಡು ರಾಮಣ್ಣನಿಗೆ ಮೋಸ ಮಾಡಬೇಕೆಂದು ಕೆಟ್ಟಬುದ್ಧಿ ಬಂದಿತು. ಇತ್ತ

ದೇಶ ಸುತ್ತಿ ತಿರುಗಿ ಬಂದ ರಾಮಣ್ಣನು ತನ್ನ ಹಣ ಕೊಡುವಂತೆ ಸಾಹುಕಾರನಿಗೆ ಕೇಳಿದನು. ಕೆಟ್ಟ ಬುದ್ಧಿಯ ಸಾಹುಕಾರ ಮೊದಲೇ ಯೋಚಿಸಿಕೊಂಡಂತೆ 'ಯಾವ ಹಣ? ನನಗೆ ಯಾವಾಗ ಕೊಟ್ಟರಿ? ವಯಸ್ಸಾದ ಮೇಲೆ ಬುದ್ಧಿ ಮಂಕಾಗುತ್ತದೆ. ನಿಮಗೂ ಹಾಗೆಯೇ ಆಗಿದೆಯೇ? ಹಣ ಕೊಟ್ಟಿರುವುದಕ್ಕೆ ಕಾಗದ ಪತ್ರವೇನಾದರೂ ಬರೆಸಿ ಸಾಕ್ಷಿ ಇಟ್ಟಿರುವೆಯಾ?' ಎಂದು ಗದರಿಸಿದನು. ದುಃಖಗೊಂಡ ರಾಮಣ್ಣನು 'ನಾನು ಕಷ್ಟ ಪಟ್ಟು ದುಡಿದ ಹಣವದು. ವಿಶ್ವಾಸದ್ರೋಹಿಗಳಾಗದೆ ವಾಪಸ್ಸು ಕೊಡಿ' ಎಂದು ಪರಿಪರಿಯಾಗಿ ಬೇಡಿಕೊಂಡನು. ಆದರೆ ಸಾಹುಕಾರನಿಗೆ ಮಾತ್ರ ದಯೆ ಬರಲಿಲ್ಲ.

ರಾಮಣ್ಣನು ಸಾಹುಕಾರನು ತನಗೆ ಮೋಸ ಮಾಡಿದ ವಿಚಾರವನ್ನು ರಾಮಕೃಷ್ಣನ ಹತ್ತಿರ ಹೇಳಿದನು. ದಯವಿಟ್ಟು ಆ ಹಣವನ್ನು ನನಗೆ ಕೊಡಿಸಬೇಕು ಎಂದು ಅವನಲ್ಲಿ ಕೇಳಿಕೊಂಡನು. ರಾಮಕೃಷ್ಣನು ಮರುದಿನ ರಾಜಸಭೆಗೆ ಸಾಹುಕಾರ ಮತ್ತು ರಾಮಣ್ಣರನ್ನು ಕರೆಸಿದನು. ಹಣ ಮೋಸ ಮಾಡಿದುದಾಗಿ ನಿನ್ನ ಮೇಲೆ ರಾಮಣ್ಣನು ದೂರು ಕೊಟ್ಟಿದ್ದಾನೆ. ಅದು ನಿಜವೇ ಎಂದು ರಾಮಕೃಷ್ಣನು ಸಾಹುಕಾರನನ್ನು ಕೇಳಿದನು. ಅದಕ್ಕೆ ಸಾಹುಕಾರ 'ನನ್ನ ಸಿರಿಯನ್ನು ನೋಡಿ ರಾಮಣ್ಣ ಹೊಟ್ಟೆಕಿಚ್ಚಿನಿಂದ ಹಾಗೆ ದೂರು ಕೊಟ್ಟಿದ್ದಾನೆ. ಸತ್ಯವಾಗಿಯೂ ಅವನು ನನಗೆ ಹಣಕೊಟ್ಟಿಲ್ಲ. ಕೊಟ್ಟಿದ್ದರೆ ಅವನಿಗೆ ಪತ್ರ ಬರೆದು ಕೊಡುತ್ತಿದ್ದೆ' ಎಂದನು. ಆಗ ರಾಮಕೃಷ್ಣನು ರಾಮಣ್ಣನಿಗೆ 'ನೀನು ಹಣಕೊಡುವಾಗ ಯಾರಿದ್ದರು? ಕಾಗದ ಪತ್ರ ಮಾಡಿಸಿರುವೆಯಾ?' ಎನ್ನಲು, 'ನಾನು ವಿಶ್ವಾಸವೇ ಮುಖ್ಯವೆಂದು ನಂಬಿ ಹಣಕೊಟ್ಟೆನು. ಅವರು ಆ ದಿನ ಮಾವಿನ ಮರದ ಕೆಳಗೆ ನಿಂತಿದ್ದರು, ನಾನು ಅವರಿಗೆ ಹಣಕೊಟ್ಟು, ದೇಶ ಸುತ್ತಲು ಹೋದೆನು' ಎಂದನು ರಾಮಣ್ಣ. ಅದನ್ನು ಕೇಳಿದ ರಾಮಕೃಷ್ಣ ಹಾಗಾದರೆ 'ಆ ಮಾವಿನ ಮರ ಸಾಕ್ಷಿ ಹೇಳಬಹುದು. ನಾನು ಹೇಳಿದೆನೆಂದು ಹೇಳಿ ಆ ಮರವನ್ನು ಕರೆದುಕೊಂಡು ಬಾ' ಎಂದನು. ಆ ಮಾತನ್ನು ಕೇಳಿದ ರಾಮಣ್ಣನು ಹಿಂದೆ ಮುಂದೆ ನೋಡುತ್ತಾ 'ಆ ಮರ ಬರುವುದೇ? ಸಾಕ್ಷಿ

ಹೇಳುವುದೇ?' ಎಂದನು. 'ಆ ವಿಚಾರ ನಿನಗೆ ಬೇಡ. ಹೋಗು ಅದಕ್ಕೆ ನನ್ನಾಜ್ಞೆಯನ್ನು ತಿಳಿಸು' ಎಂದಾಗ ರಾಮಣ್ಣನು ಅತ್ತ ನಡೆದನು.



ಹಣ ಕಳೆದುಕೊಂಡವನಿಗೆ ರಾಮಕೃಷ್ಣನು ನ್ಯಾಯ ಒದಗಿಸಿದನು


ಇತ್ತ ರಾಮಕೃಷ್ಣನು ಬಹಳವಾಗಿ ವಿಚಾರಿಸುತ್ತಾ ಅತ್ತಿತ್ತ ಓಡಾಡುತ್ತಿದ್ದನು. ಸ್ವಲ್ಪ ಹೊತ್ತಿನ ನಂತರ ರಾಮಣ್ಣ ಹೋದವನು ಬರಲೇ ಇಲ್ಲ.'ಎಲ್ಲಿ ಹೋದನವನು' ಎಂದು ಸಾಹುಕಾರನನ್ನು ಕೇಳಿದನು. ತಕ್ಷಣ ಸಾಹುಕಾರನು ಯೋಚಿಸದೆ 'ಅದು ತೋಟದಲ್ಲಿರುವ ಮಾವಿನ ಮರ. ಇಲ್ಲಿಂದ ಎರಡು ಮೈಲಿ ದೂರವಿದೆ. ರಾಮಣ್ಣ ಈಗಷ್ಟೆ ಅಲ್ಲಿಗೆ ಹೋಗಿರಬಹುದು' ಎಂದು ಹೇಳಿದನು. ಬಹಳ ಹೊತ್ತಿನ ನಂತರ ದಣಿದು ಬಂದ ರಾಮಣ್ಣ. 'ಪಂಡಿತರೇ ತೋಟದಲ್ಲಿರುವ ಆ ಮರಕ್ಕೆ ನಿಮ್ಮ ಅಪ್ಪಣೆ

ತಿಳಿಸಿದ್ದೇನೆ. ಆದರೆ ಅದು ನನ್ನ ಜೊತೆಗೆ ಬರಲಿಲ್ಲ' ಎಂದನು. ರಾಮಕೃಷ್ಣನು 'ರಾಮಣ್ಣನವರೇ ಕುಳಿತುಕೊಳ್ಳಿರಿ. ಆ ಮಾವಿನ ಮರ ಇಲ್ಲಿಗೆ ಬಂದು ಸಾಕ್ಷಿ ಹೇಳಿ ಹೋಯಿತು' ಎಂದನು ನಗುತ್ತಾ. ತಕ್ಷಣ ಎದ್ದ ಸಾಹುಕಾರನು 'ಇಲ್ಲಿಗೆ ಯಾವ ಮರವೂ ಬರಲಿಲ್ಲ ಸುಳ್ಳೇಕೆ ಹೇಳುವಿರಿ' ಎಂದನು. ಆಗ ರಾಮಕೃಷ್ಣನು 'ಎಲವೋ ಮೋಸಗಾರ. ಆ ಮರವು ನಿನ್ನ ಬಾಯಿಂದಲೇ ಸತ್ಯವನ್ನು ಹೊರಡಿಸಿತು. ನೀನು ಹಣ ತೆಗೆದುಕೊಳ್ಳದಿದ್ದರೆ ಆ ಮರ ತೋಟದಲ್ಲಿದೆ ಎಂದು ಹೇಗೆ ಹೇಳಿದೆ? ನೀನು ನಿಜ ಹೇಳದಿದ್ದರೆ ಸೇವಕರಿಂದ ಬಲವಾಗಿ ಹೊಡೆಸುವೆ' ಎಂದು ಗದರಿಸಿದನು. ಸಾಹುಕಾರನು ಗಡ ಗಡ ನಡುಗುತ್ತಾ ರಾಮಣ್ಣನ ಹಣವನ್ನು ವಾಪಸ್ಸು ಮಾಡಿದನು. ರಾಜನಿಂದ ಅವನಿಗೆ ಶಿಕ್ಷೆಯಾಯಿತು.

ರಾಮಕೃಷ್ಣ ಬೆಕ್ಕು ಸಾಕಿದುದು

ಕೃಷ್ಣದೇವರಾಯನಿಗೆ ಬೆಕ್ಕೆಂದರೆ ತುಂಬ ಪ್ರೀತಿ. ಅದಕ್ಕಾಗಿ ಬೇರೆ ಬೇರೆ ಊರುಗಳಿಂದ ಬೆಕ್ಕಿನ ಮರಿಗಳನ್ನು ತರಿಸಿದನು. ಬೆಕ್ಕಿನ ಮರಿಯೊಂದಿಗೆ ಹಾಲುಕೊಡುವ ಹಸುವೊಂದನ್ನು ಸೇರಿಸಿ ಕೆಲವರಿಗೆ ಸಾಕುವುದಕ್ಕೆ ಕೊಟ್ಟನು. ಯಾರು ಚೆನ್ನಾಗಿ ಸಾಕುವರೋ ಅವರಿಗೆ ಒಂದು ಹಳ್ಳಿಯನ್ನು ಉಂಬಳಿಯಾಗಿ ಕೊಡುವೆನೆಂದು ಹೇಳಿದನು. ರಾಜನು ಹೀಗೆಲ್ಲಾ ವಿಪರೀತವಾಗಿ ನಡೆದುಕೊಳ್ಳುವುದು ರಾಮಕೃಷ್ಣನಿಗೆ ಸರಿ ಬರಲಿಲ್ಲ. ರಾಮಕೃಷ್ಣನು ತಾನೂ ಬೆಕ್ಕು ಸಾಕುವೆನೆಂದು ಹೇಳಿ ರಾಜನಿಂದ ಬೆಕ್ಕು ಮತ್ತು ಹಸುವನ್ನು ತೆಗೆದುಕೊಂಡನು.

ಮೊದಲ ದಿನ ಬಿಸಿ ಬಿಸಿ ಹಾಲಿರುವ ಬಟ್ಟಲನ್ನು ಬೆಕ್ಕಿನ ಮರಿಯ ಮುಂದೆ ಇಟ್ಟನು. ಅದು ಆಸೆಯಿಂದ ಬಟ್ಟಲಿಗೆ ಬಾಯಿ ಹಾಕಿತು. ಮುಖವೆಲ್ಲ ಸುಟ್ಟುಹೋಯಿತು. ಬೆಕ್ಕಿನ ಮರಿಯು ಅಂದಿನಿಂದ ಹಾಲು ಕಂಡರೆ ಸಾಕು ಓಡಲಾರಂಭಿಸಿತು.




ಬಿಸಿ ಹಾಲನ್ನು ಕಂಡು ಓಡುತ್ತಿರುವ ಬೆಕ್ಕು

ಆರು ತಿಂಗಳು ಕಳೆದ ಮೇಲೆ ಎಲ್ಲರೂ ಬೆಕ್ಕನ್ನು ತರಬೇಕೆಂದು ರಾಜನು ಡಂಗುರ ಹೊಡೆಸಿದನು. ಎಲ್ಲರಂತೆ ರಾಮಕೃಷ್ಣನೂ ತನ್ನ ಬೆಕ್ಕನ್ನು ಹಿಡಿದುಕೊಂಡು ಬಂದನು. ಎಲ್ಲರ ಬೆಕ್ಕನ್ನು ನೋಡಿ ಸಂತೋಷಗೊಂಡ ರಾಜನಿಗೆ ರಾಮಕೃಷ್ಣನ ಸೊರಗಿದ ಬೆಕ್ಕು ನೋಡಿ ದುಃಖವಾಯಿತು. 'ಅಯ್ಯಾ ನಿನ್ನ ಬೆಕ್ಕೇಕೆ ಸೊರಗಿದೆ ' ಎಂದು ಕೇಳಿದನು. ಅದಕ್ಕೆ 'ರಾಮಕೃಷ್ಣನು ಪ್ರಭೋ ಇದಾವುದೋ ಕಾಡು ಜಾತಿಯ ಬೆಕ್ಕೆಂದು ಕಾಣುತ್ತದೆ. ಹಾಲು ಕಂಡೊಡನೆ ಓಡಿ ಹೋಗುತ್ತದೆ ' ಎಂದನು.

ಪರೀಕ್ಷಿಸಲೆಂದು ಹಾಲು ತಂದಾಗ,ಅದನ್ನು ನೋಡಿದೊಡನೆ ರಾಮಕೃಷ್ಣನ ಬೆಕ್ಕು ಓಡಿಹೋಯಿತು. ಅಲ್ಲಿದ್ದವರು ಅದನ್ನು ಹಿಡಿದುಕೊಂಡು ಅದರ ಸುಟ್ಟಮುಖವನ್ನು ರಾಜನಿಗೆ ತೋರಿಸಿದರು. ರಾಜನು ಅದೇಕೆ ಹೀಗಾಗಿದೆ ಎಂದಾಗ, 'ಒಂದು ದಿನ ಹಾಲು ಬಿಸಿಯಾಗಿತ್ತು. ಅದನ್ನು ಕುಡಿಯಲು ಹೋಗಿ ಹಾಗಾಗಿರಬೇಕು' ಎಂದನು. 'ಬಿಸಿಮುಟ್ಟಿದ ಬೆಕ್ಕು ಹಸಿಹಾಲು ಕುಡಿಯುವುದೇ' ಎಂಬ ಗಾದೆಯಂತೆ ಮಾಡಿರುವೆ ನೀನು ಎಂದು ರಾಜನು ಗೊಳ್ಳನೆ ನಕ್ಕನು. ಉಳಿದವರೂ ಅದನ್ನು ಕೇಳಿ ನಗತೊಡಗಿದರು. ರಾಜನಿಗೆ ಬೆಕ್ಕಿನ ಮರಿಯನ್ನು ಸಾಕಲೆಂದು ಇಷ್ಟು ದೊಡ್ಡ ಯೋಜನೆ ಹಾಕಿದ ತನ್ನ ಪೆದ್ದುತನದ ಅರಿವಾಯಿತು.

ಮಡಕೆಮುಖ ಹಾಕಿಕೊಂಡುದು

ಅರಮನೆಯ ಗೋಡೆಯ ಮೇಲೆ ಕಲಾಕಾರ ಆನಂದಮಹಿ ಬಿಡಿಸಿದ ಹಲವು ಸುಂದರ ಚಿತ್ರಗಳಿದ್ದವು. ಅದರಲ್ಲಿ ಒಂದು ಅರೆಬೆತ್ತಲೆಯಾದ ನರ್ತಕಿಯ ಚಿತ್ರವಿತ್ತು. ಆ ಚಿತ್ರ ರಾಮಕೃಷ್ಣನಿಗೆ ಹಿಡಿಸಲಿಲ್ಲ. ಅದನ್ನು ಅವನು ಅಳಿಸಿದನು. ಅದನ್ನು ನೋಡಿದ ಮಹಾಮಂತ್ರಿ ಅಪ್ಪಾಜಿ "ಹಾಗೇಕೆ ಮಾಡಿದೆ " ಎಂದು ರಾಮಕೃಷ್ಣನನ್ನು ಕೇಳಿದನು. "ಅಯ್ಯಾ ಈ ಚಿತ್ರ ಚೆನ್ನಾಗಿರಲಿಲ್ಲ. ಹೆಣ್ಣುಮಕ್ಕಳು ಅದನ್ನು ನೋಡಿದರೆ ನಾಚಿಕೊಳ್ಳುತ್ತಾರೆ. ಆದ್ದರಿಂದ ಅದನ್ನು ಅಳಿಸಿದೆ " ಎಂದು ಹೇಳಿದನು. ಅದಕ್ಕೆ ಮಹಾಮಂತ್ರಿಯು, "ನರ್ತಕಿಯಿರುವುದೇ ಹಾಗೆ. ಅಲ್ಲದೆ ಅದನ್ನು ರಾಜರು ತುಂಬ ಮೆಚ್ಚಿದ್ದಾರೆ. ಅದನ್ನೇ ಅಳಿಸಿರುವ ನಿನ್ನನ್ನು ರಾಜರು ಶಿಕ್ಷಿಸದೆ ಬಿಡಲಾರರು. ಬಹುಶಃ ನಿನ್ನ ತಲೆಯನ್ನೇ ತೆಗೆಸಬಹುದು. ಆದ್ದರಿಂದ ಎಂಟು ಹತ್ತುದಿನ ಎಲ್ಲಾದರು ತಲೆಮರೆಸಿಕೊಂಡಿರು. ರಾಜರ ಕೋಪ ಕಡಿಮೆಯಾದ ಮೇಲೆ ಬಾ " ಎಂದನು. ಮನೆಗೆ ಬಂದ ರಾಮಕೃಷ್ಣನು ಒಂದು ಮಡಕೆಗೆ ಕಣ್ಣಿನಾಕಾರದ ಎರಡು ತೂತುಗಳನ್ನು ಮಾಡಿದನು. ಮುಖದ ಮೇಲೆ ಅದನ್ನು ಬೋರಲು ಹಾಕಿಕೊಂಡು ದಿನವೂ ಓಡಾಡತೊಡಗಿದನು.



ತಲೆಗೆ ಮಡಿಕೆ ಹಾಕಿಕೊಂಡಿರುವ ರಾಮಕೃಷ್ಣ


016220

ಮಡಕೆ ಮುಖದವನನ್ನು ಕಂಡು ಜನರು ಆಶ್ಚರ್ಯಪಟ್ಟರು. ಇವನಾರೋ ಹುಚ್ಚನಿರಬಹುದೆಂದು ನಕ್ಕರು. ರಾಮಕೃಷ್ಣನ ಸುಳಿವು ಯಾರಿಗೂ ಸಿಗಲಿಲ್ಲ. ಐದಾರು ದಿನಗಳಾದರೂ ರಾಮಕೃಷ್ಣನ ಸುಳಿವಿಲ್ಲದ್ದರಿಂದ ರಾಜನು ಅವನ ಬಗ್ಗೆ ವಿಚಾರಿಸಿದನು. ಅವನ ಮನೆಗೆ ಹೋದ ರಾಜ ಸೇವಕರು ವಿಚಾರ ತಿಳಿಯದೆ ವಾಪಸ್ಸಾದರು. ಏಳೆಂಟು ದಿನಗಳ ಮೇಲೆ ಮಡಕೆ ಮುಖದ ಮನುಷ್ಯನೊಬ್ಬನು ರಾಜಸಭೆಗೆ ಬಂದನು. ಸಭಾಸದಸ್ಯರು ಗಾಬರಿಯಿಂದ ಅವನನ್ನು ನೋಡುತ್ತಿದ್ದರು. ಅದನ್ನು ಕಂಡು ನಕ್ಕ ರಾಜನು "ಯಾರು ನೀನು? ನಿನ್ನ ವೇಷ ಕಂಡು ನನಗೆ ಕೋಪಬರುತ್ತಿದೆ" ಎಂದನು. ಆಗ ಅವನು "ಪ್ರಭೂ, ನಾನು ನಿಮ್ಮ ಸೇವಕ ರಾಮಕೃಷ್ಣ" ಎಂದು ಹೇಳಿ ನಡೆದುದೆಲ್ಲವನ್ನೂ ಹೇಳಿದನು. "ರಾಜನ್, ಆ ತಪ್ಪಿಗಾಗಿ ಮಹಾಮಂತ್ರಿಯವರ

ಮಾತಿನಂತೆ ಹೀಗೆ ತಲೆ ಮರೆಸಿಕೊಂಡಿರುವೆ "ಎಂದನು. ಅದನ್ನು ಕೇಳಿದ ಮಂತ್ರಿಯು ರಾಜರೇ 'ನಾನೊಂದು ಹೇಳಿದರೆ ಇವನೊಂದು ಮಾಡುತ್ತಾನೆ. ಆ ಅರೆಬೆತ್ತಲೆ ಸುಂದರಿಯ ಚಿತ್ರವನ್ನು ಕೆಡಿಸಿದ್ದರಿಂದ ರಾಜರಿಗೆ ಕೋಪಬರಬಹುದು ಎಂದು ಹತ್ತು ದಿನ ಎಲ್ಲಿಯಾದರೂ ತಲೆಮರೆಸಿಕೋ. ರಾಜರಿಗೆ ಮುಖ ತೋರಿಸಬೇಡ ಎಂದರೆ ಅದಕ್ಕೆ ಅವನು ಹೀಗೆ ವೇಷ ಧರಿಸಿದ್ದಾನೆ ' ಎಂದನು. ಹೊಟ್ಟೆತುಂಬ ನಕ್ಕ ರಾಜನು ಅವನ ತಪ್ಪನ್ನು ಕ್ಷಮಿಸಿದನು.

ಆನೆ ತುಳಿತದ ಶಿಕ್ಷೆಯಿಂದ ಪಾರಾದುದು

ತೆನಾಲಿ ರಾಮನು ಒಂದುದಿನ ರಾಜಸಭೆಗೆ ತುಂಬ ತಡವಾಗಿ ಬಂದನು. ರಾಜನು ಅವನಿಗೆ ವಿನೋದವಾಗಿ "ರಾಜದರ್ಬಾರೆಂದರೆ ಕೊಂಡವಾಡವೆಂದು ತಿಳಿದೆಯಾ? ಪಶುಪಕ್ಷಿಗಳೂ ತಮ್ಮ ಒಡೆಯನ ಸೇವೆಯನ್ನು ಸರಿಯಾಗಿ ಮಾಡುತ್ತವೆ. ನೀನು ಅದಕ್ಕಿಂತಲೂ ಕೀಳು" ಎಂದು ಕೋಪಿಸಿಕೊಂಡ ಹಾಗೆ ಹೇಳಿದನು. ಅದಕ್ಕೆ ರಾಮಕೃಷ್ಣನು,"ಪ್ರಭುಗಳೇ ಪ್ರಾಣಿಪಕ್ಷಿಗಳಲ್ಲಿರುವಷ್ಟು ದಯೆ ಮನುಷ್ಯರಲ್ಲಿ ಇಲ್ಲ. ಹಾಗೆ ಇದ್ದಿದ್ದರೆ ರಾಜರು-ರಾಜರುಗಳ ನಡುವೆ ಯುದ್ಧ ನಡೆದು ಬಹಳ ಜನರು ನೋವು ಅನುಭವಿಸುತ್ತಿರಲಿಲ್ಲ" ಎಂದನು. ಅವನನ್ನು ಕಂಡು ಹೊಟ್ಟೆಕಿಚ್ಚು ಪಡುತ್ತಿದ್ದ ಆಸ್ಥಾನ ಪಂಡಿತರು ಪ್ರಭುಗಳೇ ರಾಜನೆಂದರೆ ಪ್ರತ್ಯಕ್ಷ ದೈವ. ನಿಮ್ಮನ್ನೇ ಕೀಳು ಎಂದು ಹೀಯಾಳಿಸಿದ ಅವನಿಗೆ ಶಿಕ್ಷೆ ಕೊಡಬೇಕು ಎಂದು ಬಣ್ಣಕಟ್ಟಿ ಹೇಳಿದರು. ರಾಮಕೃಷ್ಣನ ಮಾತುಗಳಿಂದ ಬೇಸರಗೊಂಡ ರಾಜನಿಗೂ ಕೋಪಬಂದಿತು. "ಅವನನ್ನು ಕುತ್ತಿಗೆಯವರೆಗೂ ಗುಂಡಿ ತೋಡಿ ಹೂತು ಹಾಕಿರಿ. ಆಮೇಲೆ ಆನೆಯ ಕಾಲಿನಿಂದ ಅವನ ತಲೆಯನ್ನು ತುಳಿಸಿರಿ" ಎಂದು ಸೇವಕರಿಗೆ ಹೇಳಿದನು. ರಾಜನ ಮಾತಿನಂತೆ ಸೇವಕರು ಊರ ಮುಂದಿನ ಬಯಲಿನಲ್ಲಿ ರಾಮಕೃಷ್ಣನನ್ನು ಕುತ್ತಿಗೆಯವರೆಗೂ ಹೂತು, ಆನೆಯನ್ನು ತರಲೆಂದು ಬಂದರು. ಆ ದಾರಿಯಲ್ಲಿ ಅರಮನೆಯ ಗೂನುಬೆನ್ನಿನ ಅಗಸನು ಬಂದು ಏನೆಂದು ವಿಚಾರಿಸಿದನು. ರಾಮಕೃಷ್ಣನು ಇದೇ ಸಮಯವೆಂದು



ಆನೆ ತುಳಿತದ ಶಿಕ್ಷೆಯಿಂದ ಪಾರಾದುದು

"ಓ ಅಗಸನೇ ನನಗೆ ಗೂನು ಬೆನ್ನು ಇದ್ದುದರಿಂದ ಏನೂ ಕೆಲಸ ಮಾಡಲಾರದವನಾಗಿದ್ದೆನು. ರಾಜವೈದ್ಯರ ಸಲಹೆಯಂತೆ ಹೀಗೆ ಕುಳಿತಿದ್ದೇನೆ. ನನ್ನ ಗೂನು ಈಗ ಪರಿಹಾರವಾಗಿದೆ. ಬೇಕಾದರೆ ಹೊರತೆಗೆದು ನೋಡು" ಎಂದನು. ಅಗಸನು ಅವನ ಮಾತಿಗೆ ಮರುಳಾಗಿ ಅವನನ್ನು ಹೊರತೆಗೆದು ನೋಡಿದನು. ರಾಮಕೃಷ್ಣನಿಗೆ ಹೇಳಿ ತನ್ನನ್ನು ತಾನು ಕುತ್ತಿಗೆಯವರೆಗೂ ಹುಗಿಸಿಕೊಂಡನು. ಅನಂತರ ರಾಮಕೃಷ್ಣನು ಬಟ್ಟೆಯ ಗಂಟನ್ನು ಹೊತ್ತುಕೊಂಡು ಅರಮನೆಗೆ ಬಂದನು. ರಾಜನಿಗೆ ಆಶ್ಚರ್ಯವಾಗಿ "ನೀನು ಇಲ್ಲಿಗೆ ಹೇಗೆ ಬಂದೆ" ಎಂದನು. ರಾಮಕೃಷ್ಣನು ನಡೆದ ವಿಚಾರವನ್ನು ರಾಜನಿಗೆ ತಿಳಿಸಿದನು. ತನ್ನ ಅವಿವೇಕದ ಬಗ್ಗೆ ರಾಜನಿಗೆ ಅರಿವಾಯಿತು.

ರಾಜ ದಯೆಯಿಲ್ಲದವನು ಎಂಬುದಕ್ಕೆ ತಾನೇ ಉದಾಹರಣೆ ಒದಗಿಸಿದೆ ಎಂದು ತಿಳಿದು ನಾಚಿಕೆಪಟ್ಟನು. ರಾಮಕೃಷ್ಣನ ಚಾತುರ್ಯಕ್ಕೆ ಸಂತೋಷಪಟ್ಟನು.

ಕಳ್ಳರನ್ನು ಮೋಸಗೊಳಿಸಿದ್ದು

ಕಳ್ಳರು ಒಂದು ದಿನ ಕಳ್ಳತನ ಮಾಡಲೆಂದು ರಾಮಕೃಷ್ಣನ ಮನೆಯಲ್ಲಿ ಅಡಗಿ ಕುಳಿತರು. ರಾಮಕೃಷ್ಣನು ಎಂದಿನಂತೆ ಮನೆಗೆ ಬಂದನು. ತನ್ನ ಮನೆಯಲ್ಲಿ ಯಾರೋ ಅಡಗಿರುವ ಬಗ್ಗೆ ಸಂಶಯ ಬಂತು. ತಕ್ಷಣ ಹೆಂಡತಿಗೆ ಜೋರಾಗಿ "ಏ ಏನೇ ಈಗ ನಗರದಲ್ಲಿ ಕಳ್ಳರ ಹಾವಳಿ ಹೆಚ್ಚಾಗಿದೆ. ನಾವು ಜಾಗರೂಕರಾಗಿರಬೇಕು. ನಮ್ಮ ಸಂಪತ್ತನ್ನೆಲ್ಲ ಪೆಟ್ಟಿಗೆಯಲ್ಲಿ ತುಂಬಿ ಹಿತ್ತಿಲ ಬಾವಿಯಲ್ಲಿ ಹಾಕೋಣ. ಕಳ್ಳರ ಹಾವಳಿ ಕಡಿಮೆಯಾದ ಮೇಲೆ ತೆಗೆದುಕೊಂಡರಾಯಿತು" ಎಂದನು. ಇಬ್ಬರೂ ಸೇರಿ ಒಂದು ಮುರುಕು ಪೆಟ್ಟಿಗೆಯಲ್ಲಿ ಮಡಿಕೆ ಚೂರು, ಕಲ್ಲುಗಳನ್ನು ತುಂಬಿದರು. ಭಾರವಾಗಿದ್ದ ಅದನ್ನು ಕಷ್ಟಪಟ್ಟು ಬಾವಿಗೆ ಹಾಕಿದರು. ಅದನ್ನು ನೋಡಿದ ಕಳ್ಳರಿಗೆ ಬಹಳ ಸಂತೋಷವಾಯಿತು. ಇತ್ತ ರಾಮಕೃಷ್ಣನು ಹೆಂಡತಿಯನ್ನು ಒಳಗೆ ಮಲಗಿಸಿ ತಾನು ಹಿತ್ತಲಿನ ಬಾಳೆಯಗಿಡದ ಮರೆಯಲ್ಲಿ ಅಡಗಿ ಕುಳಿತನು. ಕಳ್ಳರು ಬಾವಿಯ ಬಳಿಗೆ ಬಂದು ನೋಡಿದರು. ಒಳಗೆ ಇಳಿಯುವ ಧೈರ್ಯ ಯಾರಿಗೂ ಇರಲಿಲ್ಲ. ಅವರಲ್ಲೊಬ್ಬನು "ನಾವು ಬಾವಿಯಲ್ಲಿದ್ದಾಗ ರಾಮಕೃಷ್ಣನು ಬಂದರೆ ನಾವು ಸಾಯುವುದು ನಿಜ. ಬಾವಿಯಲ್ಲಿ ಆಳುದ್ದ ನೀರಿದೆ. ನೀರನ್ನೆಲ್ಲಾ ಸೇದಿ ಹಾಕಿ ಪೆಟ್ಟಿಗೆ ತೆಗೆದುಕೊಂಡು ಹೋಗೋಣ" ಎಂದನು. ಅದನ್ನು ಎಲ್ಲರೂ ಒಪ್ಪಿ ನೀರು ಸೇದಲಾರಂಭಿಸಿದರು. ಸರತಿಯಂತೆ ನೀರು ಸೇದಿಸೇದಿ ಸುಸ್ತಾದರೂ ನೀರು ಖಾಲಿಯಾಗಲಿಲ್ಲ. ಬೆಳಗಾಗುವುದಕ್ಕೆ ಇನ್ನೂ ಮೂರುನಾಲ್ಕು ಗಂಟೆಯಿದೆ ಎಂದು ಬೇಗ ಬೇಗ ಸೇದತೊಡಗಿದರು. ಬೆಳಗಾಗುವುದಕ್ಕೆ ಇನ್ನೊಂದು ಗಂಟೆ ಇತ್ತು. ಹಕ್ಕಿ, ಪಕ್ಷಿಗಳೆಲ್ಲ ಕೂಗಲಾರಂಭಿಸಿದವು. ನೀರು ಸೇದಿಸೇದಿ ಸುಸ್ತಾದ ಕಳ್ಳರು ಕುಳಿತರು. ಎಲ್ಲರೂ ಹಸಿವಿನಿಂದ ಬಳಲತೊಡಗಿದ್ದರು. ಅವರ ಗೋಳನ್ನು ನೋಡಲಾಗದ



ಕಳ್ಳರು ಬಾವಿ ನೀರನ್ನು ಸೇದಿಹಾಕುತ್ತಿರುವುದನ್ನು ರಾಮಕೃಷ್ಣ ನೋಡುತ್ತಿದ್ದಾನೆ

ರಾಮಕೃಷ್ಣನು ಅಯ್ಯಾ ಕಳ್ಳ ಜನರೆ ಇನ್ನೂ ಹೆಚ್ಚು ನೀರು ಹಾಕಿದರೆ ಬಾಳೆ ಸಸಿಗಳು ಕೊಳೆಯುತ್ತವೆ ಸಾಕು ಎಂದು ಕೂಗಿದನು. ಅವನ ಸ್ವರ ಕೇಳಿದೊಡನೆ ಕಳ್ಳರು ಓಡಿಹೋದರು. ರಾಜನು ಆ ವಿಚಾರವನ್ನು ಕೇಳಿ ಅವನ ಜಾಣತನವನ್ನು ಮೆಚ್ಚಿದನು.

ಬಡವನ ಮಗಳನ್ನು ಹುಡುಕಿಕೊಟ್ಟಿದ್ದು

ವಿಶ್ವನಾಥಯ್ಯನೆಂಬ ಬಡವನಿಗೆ ಬಹಳ ಸುಂದರವಾಗಿದ್ದ ಗಿರಿಜಾ ಎಂಬ ಮಗಳಿದ್ದಳು. ತಾಯಿ ಇಲ್ಲದ ಅವಳನ್ನು ತುಂಬ ಪ್ರೀತಿಯಿಂದ ಸಾಕುತ್ತಿದ್ದನು. ಗಿರಿಜಾ ಒಂದು ದಿನ ಬಾವಿಗೆ ನೀರು ತರಲು ಹೋಗಿದ್ದಳು. ಅವಳ ರೂಪವನ್ನು ನೋಡಿದ ಕಳ್ಳನೊಬ್ಬನು ತಿಂಡಿಯ ಆಶೆ ತೋರಿಸಿ ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಅಡಗಿಸಿಟ್ಟನು. ಇತ್ತ ಮಗಳು ಬರದುದನ್ನು ಕಂಡ ವಿಶ್ವನಾಥಯ್ಯ ಎಲ್ಲೆಲ್ಲೋ ಹುಡುಕಿದರೂ ಅವಳ ಸುಳಿವಿರಲಿಲ್ಲ. ಕಳ್ಳನು ಅವಳನ್ನು ಹದಿನಾರು ವರ್ಷದವರೆಗೂ ಸಾಕಿ, ಊರಿನ ವೇಶ್ಯೆಯೊಬ್ಬಳಿಗೆ ಹಣಕ್ಕೆ ಮಾರಿದನು. ವೇಶ್ಯೆಯೂ ಗಿರಿಜಾಳ ರೂಪವನ್ನು ಕಂಡು ತನ್ನ ಭಾಗ್ಯವೆಂದು ತಿಳಿದಳು. ಇವಳಿಂದ ಹಣದ ಸುರಿಮಳೆಯಾಗುತ್ತದೆಂದು ಪ್ರೀತಿಯಿಂದ ಆರೈಕೆ ಮಾಡುತ್ತಿದ್ದಳು. ಅಷ್ಟೆಲ್ಲ ಸುಖವನ್ನು ಕಂಡ ಗಿರಿಜಾಳಿಗೆ ತನ್ನ ತಂದೆಯ ನೆನಪು ಬರಲೇ ಇಲ್ಲ. ವೇಶ್ಯೆಯು ಅವಳಿಗೆ ನರ್ತನ, ಹಾಡು ಎಲ್ಲವನ್ನು ಕಲಿಸಿದಳು. ರೂಪದಿಂದ ಊರಿನವರ ಕಣ್ಣಿಗೆ ನಾಟುವಂತಿದ್ದಳು. ಅದರಿಂದ ಮುದುಕಿಗೆ ಹೆಚ್ಚು ದುಡ್ಡು ಬರಲಾರಂಭಿಸಿತು.

ಆ ಊರಿನ ಶ್ರೀಮಂತನೊಬ್ಬನು ಒಮ್ಮೆ ತನ್ನ ಮಗನ ಮದುವೆಗೆ ಗಿರಿಜಾಳ ನರ್ತನ ಕಾರ್ಯಕ್ರಮವನ್ನು ಏರ್ಪಡಿಸಿದ್ದನು. ಅಲ್ಲಿಗೆ ಬಂದಿದ್ದ ವಿಶ್ವನಾಥಯ್ಯನು ತನ್ನ ಮಗಳನ್ನು ಗುರುತಿಸಿದನು. ಅವಳ ಹಣೆಯ ಮೇಲಿದ್ದ ಕಪ್ಪು ಮಚ್ಚೆ ಹಾಗೆಯೇ ಇತ್ತು. ಈಗ ದುಡುಕಿದರೆ ತನ್ನ ಮಾತನ್ನು ಯಾರೂ ನಂಬುವುದಿಲ್ಲ. ಅಲ್ಲದೆ ಸುಖವಾಗಿರುವ ಅವಳೂ ನನ್ನನ್ನು ಗುರುತಿಸದೆ ಇರಬಹುದು. ಎಂದು ಯೋಚಿಸಿದನು. ಅವಳ ವಿಚಾರವನ್ನೆಲ್ಲ ತಿಳಿದು ರಾಮಕೃಷ್ಣನಲ್ಲಿಗೆ ಬಂದು ಸಹಾಯ ಬೇಡಿದನು. ರಾಮಕೃಷ್ಣನು ಅವನನ್ನು ರಾಜನ ಬಳಿಗೆ ಕರೆದುಕೊಂಡು ಹೋದನು.

ರಾಜನ ಆಜ್ಞೆಯಂತೆ ಸೇವಕರು ಆ ವೇಶ್ಯೆ ಮತ್ತು ಗಿರಿಜಾಳನ್ನು ಕರೆದುಕೊಂಡು ಬಂದರು. ರಾಮಕೃಷ್ಣನು ಅವರಿಬ್ಬರನ್ನೂ ದಿಟ್ಟಿಸಿ ನೋಡಿ ಇವಳಾರು ಎಂದು ಕೇಳಿದನು. ವೇಶ್ಯೆಯು "ಇವಳು ನನ್ನ ಸಾಕು ಮಗಳು ಗಂಗಾಂಬೆ. ಅವಳ ತಂದೆಯೇ ನನಗೆ ಮಾರಾಟ ಮಾಡಿ ಹೋಗಿದ್ದಾನೆ" ಎಂದಳು. ರಾಮಕೃಷ್ಣನು "ನಿನ್ನ ತಂದೆ ಯಾರೆಂದು ಗೊತ್ತೆ" ಎಂದಾಗ ಗಿರಿಜಾ ಇಲ್ಲವೆಂದು ತಲೆಯಲ್ಲಾಡಿಸಿದಳು. "ಚಿಕ್ಕಂದಿನಿಂದಲೂ ಇವಳೇ ನನ್ನನ್ನು ಪ್ರೀತಿಯಿಂದ ಸಾಕಿದ್ದಾಳೆ. ಇವಳೇ ನನ್ನ ತಾಯಿ" ಎಂದು ಹೇಳಿದಳು. ದಿಗಿಲುಗೊಂಡ ರಾಮಕೃಷ್ಣನು "ನೀವಿಬ್ಬರೂ ಹೇಳಿಕಳಿಸಿದಾಗ ಬನ್ನಿ" ಎಂದು ಮನೆಗೆ ಕಳುಹಿಸಿದನು.

ವಿಶ್ವನಾಥನಿಗೆ ನಿನ್ನ ಮಗಳ ಹೆಸರೇನೆನ್ನಲು ಗಿರಿಜಾ ಎಂದನು. ಅವಳ ಹಣೆಯ ಮೇಲಿರುವ ಕಪ್ಪು ಮಚ್ಚೆಯೇ ನನಗೆ ಕುರುಹು. ಗಿರಿಜಾ ಎಂದು ಕೂಗಿದರೆ ಎಲ್ಲಿದ್ದರೂ ಓಡಿಬರುವಳೆಂದು ಹೇಳಿದನು. "ಸರಿ ನಾಳೆ ನೀನು ಜನರ ನಡುವೆ ಅವಳಿಗೆ ಕಾಣದಂತೆ ನಿಂತು ಗಿರಿಜಾ ಎಂದು ಕೂಗು " ಎಂದು ಹೇಳಿದನು. ಮಾರನೆಯ ದಿನ ರಾಜಸಭೆಯಲ್ಲಿ ವಿಚಾರಣೆ ನಡೆಯುತ್ತಿದ್ದಾಗ ವಿಶ್ವನಾಥನು ಜನರ ನಡುವಿನಿಂದ 'ಗಿರಿಜಾ ಮಗಳೇ, ಗಿರಿಜಾ' ಎಂದು ಕೂಗಿದನು. ಕೂಡಲೇ ಅವಳು ಗಾಬರಿಯಿಂದ ಅತ್ತಿತ್ತ ನೋಡತೊಡಗಿದಳು. ವಿಶ್ವನಾಥನು ಮತ್ತೊಮ್ಮೆ ಹಾಗೆಯೇ ಕೂಗಲು ಗಿರಿಜಾ ದನಿಬಂದತ್ತ ಹೊರಟಳು. ತಕ್ಷಣ ಹೋಗಬೇಡೆಂದು ವೇಶ್ಯೆ ಸನ್ನೆ ಮಾಡಲು ಹಾಗೇ ನಿಂತಳು. ಇದೆಲ್ಲವನ್ನೂ ಸೂಕ್ಷ್ಮವಾಗಿ ನೋಡಿದ ರಾಮಕೃಷ್ಣನು ಗಿರಿಜಾಳಿಗೆ ನಿಜ ಹೇಳುವಂತೆ ಬೆದರಿಸಿದನು. ಅವಳು ನಡೆದುದೆಲ್ಲವನ್ನೂ ಹೇಳಿದಳು. ಅವಳನ್ನು ಎರಡು ಸಾವಿರ ರೂಪಾಯಿಗೆ ತಾನು ಕೊಂಡುಕೊಂಡಿರುವುದಾಗಿ ವೇಶ್ಯೆಯು ಒಪ್ಪಿಕೊಂಡಳು. ರಾಮಕೃಷ್ಣನು ವಿಶ್ವನಾಥನನ್ನು ಮುಂದೆ ಕರೆದನು. ಅವನನ್ನು ನೋಡಿದೊಡನೆ ಗಿರಿಜಾ ಅಪ್ಪಾ ಎಂದು ಅಪ್ಪಿಕೊಂಡಳು. ಅವಳನ್ನು ಒಪ್ಪಿಸಿ ಬಡವನಾದರೂ ಸರಿ ಬೇಗ ಮದುವೆ ಮಾಡು. ಇಲ್ಲದಿದ್ದರೆ ಅನಾಹುತವಾದೀತೆಂದು ವಿಶ್ವನಾಥನಿಗೆ ಒಪ್ಪಿಸಿದನು. ಮಕ್ಕಳನ್ನು ಮಾರಲು ತೆಗೆದುಕೊಂಡ ಮುದುಕಿಗೆ ಶಿಕ್ಷೆಯಾಯಿತು.

ತಿಲಕಾಷ್ಠ ಮಹಿಷಬಂಧನ

ಒಂದು ದಿನ ಸಕಲಶಾಸ್ತ್ರಗಳನ್ನೂ ತಿಳಿದ ವಿದ್ಯಾಧರನೆಂಬ ಪಂಡಿತನು ರಾಜಸಭೆಗೆ ಬಂದನು. 'ಮಹಾರಾಜ ನಿಮ್ಮ ಆಸ್ಥಾನ ಪಂಡಿತರೊಂದಿಗೆ ವಿದ್ವತ್ ಚರ್ಚೆ ಮಾಡಲು ಬಂದಿದ್ದೇನೆ. ಅವರಲ್ಲಿ ಯಾರು ನನ್ನ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುವರೋ ಅವರಿಗೆ ನನ್ನ ಬಿರುದುಗಳನ್ನು ಒಪ್ಪಿಸಿ ಶರಣಾಗುವೆ ' ಎಂದು ಸವಾಲೆಸೆದನು. ಆಸ್ಥಾನಪಂಡಿತರು ಗಾಬರಿಯಿಂದ ರಾಮಕೃಷ್ಣನ ಕಡೆ ನೋಡಿದರು. ಅವನು ತನ್ನ ಸ್ಥಾನದಿಂದ ಮೇಲೆದ್ದು ನಿಂತು "ಪಂಡಿತರೇ, ಇಂದು ನಿಮಗೆ ಆಯಾಸವಾಗಿದೆ. ವಿಶ್ರಾಂತಿ ತೆಗೆದುಕೊಳ್ಳಿರಿ. ನಾಳೆಗೆ ವಾದವಿವಾದವನ್ನು ಇಟ್ಟುಕೊಂಡಿರುವೆವು" ಎಂದನು. ರಾಜನು ವಿದ್ಯಾಧರನನ್ನೂ ವಿಶ್ರಾಂತಿಗೃಹಕ್ಕೆ ಕಳುಹಿಸಿದನು. ರಾಜನ ಪಂಡಿತ ಮಂಡಲಿ ತಮ್ಮ ಮರ್ಯಾದೆ ಉಳಿಸುವಂತೆ ರಾಮಕೃಷ್ಣನಲ್ಲಿ ಬೇಡಿಕೊಂಡರು. ವಿದ್ಯಾಧರನೇ ಫಜೀತಿಪಟ್ಟು ಓಡಿಹೋಗುವಂತೆ ಮಾಡುತ್ತೇನೆ. ಧೈರ್ಯವಾಗಿರಿ ಎಂದು ಹೇಳಿದನು. ಮರುದಿನ ಎಳ್ಳಿನ ಕಡ್ಡಿಗಳಿಗೆ ಎಮ್ಮೆಯ ಹಗ್ಗವನ್ನು ಕಟ್ಟಿ ಅದನ್ನು ಶುಭ್ರವಾದ ಬಟ್ಟೆಯಲ್ಲಿ ಸುತ್ತಿಕೊಂಡು ರಾಜಸಭೆಗೆ ಬಂದನು. ವಿದ್ಯಾಧರನು ಗರ್ವದಿಂದ ಕುಳಿತು ರಾಮಕೃಷ್ಣನೆಡೆ ನೋಡುತ್ತಿದ್ದನು. ಅವನ ಬಳಿ ಇದ್ದ ವಸ್ತುವನ್ನು ನೋಡಿ ಅಯ್ಯಾ ಅದೇನೆಂದು ಕೇಳಿದನು. ಇದು ನನ್ನ ಸ್ವರಚಿತ ಕೃತಿ 'ತಿಲಕಾಷ್ಠ ಮಹಿಷಬಂಧನ' ಎಂದನು. ವಿದ್ಯಾಧರನಿಗೆ ಆಶ್ಚರ್ಯವಾಯಿತು. 'ತಾನು ಎಷ್ಟೊಂದು ಕೃತಿಗಳನ್ನು ಓದಿದ್ದೇನೆ. ಆ ಕೃತಿಯ ಹೆಸರನ್ನೇ ಕೇಳಿಲ್ಲವಲ್ಲ' ಎಂದು ಯೋಚಿಸತೊಡಗಿದನು. ರಾಮಕೃಷ್ಣನು ಆ ಕೃತಿಯ ಬಗ್ಗೆ ವಾದ ಮಾಡೋಣವೆನ್ನಲು ಅದನ್ನು ನಾಳೆ ಮಾಡೋಣವೆಂದು ರಾಜನಿಂದ ಅಪ್ಪಣೆ ಪಡೆದುಹೊರಟನು.


ವಿಶ್ರಾಂತಿ ಗೃಹಕ್ಕೆ ಬಂದು ಆ ಕೃತಿಯ ಬಗ್ಗೆ ಎಷ್ಟು ಯೋಚಿಸಿದರೂ ಏನೂ ಹೊಳೆಯಲಿಲ್ಲ. ನಾಳಿನ ರಾಜಸಭೆಗೆ ಹೋದರೆ ತನಗೆ ಅವಮಾನ ಖಂಡಿತವೆಂದು ಆ ರಾತ್ರಿಯೇ ಓಡಿಹೋದನು. ಮರುದಿನ ರಾಜಸಭೆಗೆ ಆತ ಬರದಿದ್ದುದನ್ನು ಕಂಡು ರಾಜನು ಸೇವಕರನ್ನು ಕಳುಹಿಸಿದನು. ರಾಜಸೇವಕರು

ಅವನಿಲ್ಲದ ಸಮಾಚಾರವನ್ನು ತಂದರು. ವಿದ್ಯಾಧರಪಂಡಿತ ಓಡಿಹೋದದ್ದು ರಾಜನಿಗೆ ಆಶ್ಚರ್ಯವಾಯಿತು. ರಾಮಕೃಷ್ಣನನ್ನು ಆ ಕೃತಿಯ ಬಗ್ಗೆ ಕೇಳಿದನು. ಅವನು ನಗುತ್ತಾ ಎಳ್ಳಿನ ಕಡ್ಡಿಗಳು ಮತ್ತು ಹಗ್ಗವನ್ನು ತೋರಿಸಿದನು. ತಿಲ ಎಂದರೆ ಎಳ್ಳು, ಕಾಷ್ಠ ಎಂದರೆ ಕಡ್ಡಿ, ಮಹಿಷ ಎಂದರೆ ಎಮ್ಮೆ, ಬಂಧನ ಎಂದರೆ ಕಟ್ಟುವ ಹಗ್ಗ. ಅಲ್ಪವಿದ್ಯೆ ಮಹಾಗರ್ವಿಯಾಗಿದ್ದ ಅವನಿಗೆ ಹೀಗೆ ಮಾಡಬೇಕಾಯಿತು ಎಂದನು. ರಾಜನೊಂದಿಗೆ ಆಸ್ಥಾನದವರೆಲ್ಲ ನಕ್ಕರು. ಇವೆಲ್ಲವನ್ನೂ ಒಟ್ಟಿಗೆ ಕೂಡಿಸಿ ಗ್ರಂಥದ ಹೆಸರು ಎನ್ನುವಂತೆ ಹೇಳಿದೆ ಅಷ್ಟೆ. ನಿಜವಾಗಿ ಆ ಹೆಸರಿನ ಯಾವ ಗ್ರಂಥವೂ ಇಲ್ಲ ಎಂದನು.

ಚಿನ್ನದ ಮಾವಿನ ಹಣ್ಣಿನ ದಾನ

ಕೃಷ್ಣದೇವರಾಯನ ತಾಯಿ ನಾಗಾಂಬೆಯು ಧರ್ಮಶೀಲೆಯಾಗಿದ್ದಳು. ತನಗೆ ವಯಸ್ಸಾದಂತೆ ಗೋದಾನ, ಭೂದಾನ ಮೊದಲಾದುವನ್ನು ಹೆಚ್ಚು ಹೆಚ್ಚಾಗಿ ಮಾಡಿದಳು. ಕೊನೆಗೆ ಮಾವಿನಹಣ್ಣು ದಾನ ಮಾಡಬೇಕೆಂದು ಹೇಳಿದಳು. ರಾಜನು ಮಾವಿನ ಹಣ್ಣುಗಳನ್ನು ತರಿಸುವಷ್ಟರಲ್ಲಿ ಅವಳು ಸತ್ತುಹೋದಳು. ತಾಯಿಯ ಕೊನೆಯ ಆಸೆಯನ್ನು ಪೂರೈಸಲಾಗದಿದ್ದುದಕ್ಕೆ ರಾಜನಿಗೆ ದುಃಖವಾಯಿತು. ಈ ದಾನದ ಆಶೆಯಲ್ಲೇ ಸತ್ತ ಆಕೆಯ ಆತ್ಮದ ಶಾಂತಿಗಾಗಿ ನೂರೊಂದು ಜನ ಬ್ರಾಹ್ಮಣರಿಗೆ ಚಿನ್ನದ ಮಾವಿನ ಹಣ್ಣು ಕೊಡಬೇಕೆಂದು ರಾಜ ಪುರೋಹಿತರು ಹೇಳಿದರು. ರಾಜನು ಅದರಂತೆ ತಿಥಿಯ ದಿನ ಬ್ರಾಹ್ಮಣರಿಗೆ ಭೋಜನ ಮಾಡಿಸಿ ಚಿನ್ನದ ಮಾವಿನ ಹಣ್ಣುಗಳನ್ನು ದಾನ ಕೊಟ್ಟನು.

ಇದೆಲ್ಲವನ್ನೂ ತಿಳಿದ ರಾಮಕೃಷ್ಣನು ಅರಸನ ಪೆದ್ದುತನ, ಪುರೋಹಿತರ ದುರಾಶೆಗೆ ಚಿಂತಿಸಿದನು. ಆ ಪುರೋಹಿತರು ಅರಮನೆಯಿಂದ ಹೊರಬರುತ್ತಿದ್ದರು. ಆಗ ರಾಮಕೃಷ್ಣನು ನಾಳೆ ನನ್ನ ತಾಯಿಯ ತಿಥಿ. ತನ್ನ ಮನೆಗೂ ಬಂದು ದಾನ ಸ್ವೀಕರಿಸಬೇಕೆಂದು ಅವರನ್ನು ಕರೆದನು. ಮನೆಗೆ ಬಂದ ಅವರನ್ನು ಕುಳ್ಳಿರಿಸಿ ವಿನಯದಿಂದ ಕೈ ಮುಗಿದನು. 'ಬ್ರಾಹ್ಮಣೋತ್ತಮರೇ ನನ್ನ ತಾಯಿಯ ಕೊನೆಯ ಆಸೆ



ಪುರೋಹಿತರು ಚಿನ್ನದ ಮಾವಿನ ಹಣ್ಣನ್ನು ಹಿಂದಿರುಗಿಸಿದರು

ಪೂರೈಸಲಾಗಲಿಲ್ಲ. ಅವಳಿಗೆ ಧನುರ್ವಾಯುವಾಗಿತ್ತು. ನೋವು ತಾಳದೆ ತನಗೆ ಕಾದ ಸರಳಿನಿಂದ ಬರೆಕೊಡು ಎಂದು ನನಗೆ ಹೇಳಿದಳು. ಅವಳು ನರಳುವುದನ್ನು ನೋಡಲಾಗದೆ ನಾನು ಅದಕ್ಕೆ ಒಪ್ಪಿದೆ. ಆದರೆ ಸರಳನ್ನು ಕಾಸಿ ತರುವಷ್ಟರಲ್ಲಿ ಸತ್ತು ಹೋಗಿದ್ದಳು. ಅವಳ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ನಿಮಗೆಲ್ಲ ಒಂದೊಂದು ಬರೆಕೊಡಬೇಕು. ದಯಮಾಡಿ ಸ್ವೀಕರಿಸಿ ಅವಳ ಆತ್ಮಕ್ಕೆ ಶಾಂತಿ ದೊರಕಿಸಿ ಎಂದು ಬೇಡಿಕೊಂಡನು. ಆ ಮಾತುಗಳನ್ನು ಕೇಳುತ್ತಿದ್ದಂತೆಯೇ ಬ್ರಾಹ್ಮಣರು ಬೆವೆತುಹೋದರು. ಕಾದ ಸರಳುಗಳನ್ನು ಕಂಡು ಗಡಗಡ ನಡುಗಲಾರಂಭಿಸಿದರು. ತಮ್ಮ ದುರಾಸೆಯ ಫಲವಾಗಿ ಈ ಸ್ಥಿತಿ ಬಂದೊದಗಿತು ಎಂಬುದನ್ನು ಅರಿತರು. ಎಲ್ಲರೂ ರಾಮಕೃಷ್ಣನ ಕಾಲಿಗೆ ಬಿದ್ದರು. ದಾನವನ್ನೆಲ್ಲ ಅವನಿಗೆ ಕೊಟ್ಟು ತಮ್ಮನ್ನು

ಬಿಡುವಂತೆ ಬೇಡಿಕೊಂಡರು. ರಾಮಕೃಷ್ಣನು ಅವರ ಪರಿತಾಪವನ್ನು ನೋಡಿ ಅವರನ್ನು ಬಿಟ್ಟನು. ತಕ್ಷಣ ಅಲ್ಲಿಂದ ಅವರೆಲ್ಲ ರಾಜನ ಬಳಿಗೆ ಬಂದು ತಾವು ಕೊಟ್ಟ ದಾನ ದಕ್ಷಿಣೆಗಳನ್ನೆಲ್ಲ ರಾಮಕೃಷ್ಣ ಕಿತ್ತುಕೊಂಡನೆಂದು ದೂರಿದರು. ರಾಜನು ರಾಮಕೃಷ್ಣನನ್ನು ಕರೆಸಿ ವಿಚಾರಿಸಿದನು. ರಾಮಕೃಷ್ಣನು 'ಪ್ರಭೂ ತಾವು ತಮ್ಮ ತಾಯಿಯ ಕೊನೆಯ ಆಸೆಯಂತೆ ಚಿನ್ನದ ಮಾವಿನಹಣ್ಣನ್ನು ದಾನಕೊಟ್ಟು ಶಾಂತಿ ದೊರಕಿಸಿದಿರಿ. ನಾನು ನನ್ನ ತಾಯಿಯ ಆತ್ಮಕ್ಕೆ ಶಾಂತಿ ಮಾಡಬೇಕು. ಅದಕ್ಕಾಗಿ ಬರೆ ಸ್ವೀಕರಿಸಿಬೇಕೆಂದಾಗ, ಹೆದರಿ ಅದನ್ನೆಲ್ಲ ನನಗೆ ಕೊಟ್ಟರು' ಎಂದು ಹೇಳಿದನು. ರಾಜನಿಗೆ ಪುರೋಹಿತರ ದುರಾಸೆಯು ತಿಳಿಯಿತು. ತನ್ನ ಪೆದ್ದುತನವನ್ನು ಅರಿತನು. ತನಗೆ ಬುದ್ಧಿಕಲಿಸಲು ರಾಮಕೃಷ್ಣನು ಹೂಡಿದ ಉಪಾಯವನ್ನು ನೋಡಿ ಹೊಟ್ಟೆತುಂಬಾ ನಕ್ಕನು.

ರಾಮಕೃಷ್ಣನ ಕುಶಲತೆ

ರಾಮಕೃಷ್ಣನು ಹುಟ್ಟನಿಂದಲೇ ಬಡವ. ರಾಜನ ಆಸ್ಥಾನ ಸೇರಿದ ಮೇಲೆ ಅವನಿಗೆ ಅನೇಕ ಬಹುಮಾನಗಳು ಬಂದವು. ಆ ಹಣದಿಂದ ಮನೆಯ ಸಾಮಾನುಗಳನ್ನು ಕೊಂಡನು. ತಾಯಿಯ ಮರಣದ ಸಮಯದಲ್ಲಿ ಬಹಳ ಹಣ ಖರ್ಚು ಮಾಡಿದನು. ಅದಕ್ಕಾಗಿ ಹೆಚ್ಚು ಸಾಲ ಮಾಡಿದನು. ಆದರೂ ಅದನ್ನು ಯಾರಿಗೂ ಹೇಳದೆ ಸದಾ ನಗುನಗುತ್ತಾ ಇರುತ್ತಿದ್ದನು. ಧೈರ್ಯವೇ ಅವನ ಬದುಕಿನ ಜೀವಾಳವಾಗಿತ್ತು. ಅರಸನಲ್ಲಿಗೆ ಹೋಗುವಾಗ ಆಸ್ಥಾನದ ಉಡುಗೆ ತೊಡುಗೆಗಳನ್ನು ತೊಟ್ಟು ಹೋಗುತ್ತಿದ್ದನು. ಮನೆಗೆ ಬಂದೊಡನೆ ಸಾಮಾನ್ಯ ವೇಷದಲ್ಲಿದ್ದು ಮನೆಯ ಕೆಲಸವನ್ನೆಲ್ಲ ತಾನೇ ಮಾಡುತ್ತಿದ್ದನು. ಅಕ್ಕಿ, ಜೋಳವನ್ನು ತಾನೇ ಹಸನು ಮಾಡಿ ಬೀಸುಕಲ್ಲಿನಲ್ಲಿ ಬೀಸುತ್ತಿದ್ದನು. ಮನೆಯಲ್ಲಿ ಯಾವ ಆಡಂಬರವೂ ಇರಲಿಲ್ಲ.

ಒಂದು ದಿನ ಅರಸನು ಸಾಮಾನ್ಯ ವೇಷದಲ್ಲಿ ರಾಜ್ಯ ಸಂಚಾರಕ್ಕೆ ಹೋಗಿದ್ದನು. ಬರುವಾಗ ರಾಮಕೃಷ್ಣನ ಮನೆಯ ಬಳಿಗೆ ಬಂದನು. ಮುಂಬಾಗಿಲು ಹಾಕಿತ್ತು. ಆದರೆ ಬೆಳಕಿಂಡಿಯಿಂದ ಹೊಗೆ ಹೋಗುತ್ತಿತ್ತು. ಅದನ್ನು ನೋಡಿದ ರಾಜನು

ಬಹುಶಃ ರಾಮಕೃಷ್ಣನು ಒಳಗಿರಬಹುದೆಂದು ಇಣುಕಿದನು. ಪೂರ್ಣ ಹೊಗೆ ತುಂಬಿದ ಮನೆಯಲ್ಲಿ ರಾಮಕೃಷ್ಣನು ಬೀಸುತ್ತಿದ್ದನು. ಅವನ ಮೈಯೆಲ್ಲ ಬೆವೆತು ಹೋಗಿತ್ತು. ಅದನ್ನು ನೋಡಿದ ರಾಜನಿಗೆ ಅವನ ಬಗ್ಗೆ ಕನಿಕರ ಬಂತು. 'ಇಷ್ಟು ಕಷ್ಟದಲ್ಲಿದ್ದರೂ ತನ್ನಲ್ಲಿ ಹೇಳಲಿಲ್ಲವಲ್ಲ ಎಂಥ ಸ್ವಾಭಿಮಾನಿ' ಎಂದುಕೊಂಡನು.

ಮರುದಿನದ ರಾಜಸಭೆಗೆ ರಾಮಕೃಷ್ಣನು ತಡವಾಗಿ ಬಂದನು. ರಾಜನು ಏಕೆ ತಡ ಎಂಬಂತೆ ಅವನ ಮುಖ ನೋಡಿದನು. ಅವನು ತನ್ನ ಕೈಯನ್ನು ಬೀಸಿದಂತೆ ತಿರುಗಿಸಿ, ಹೊಟ್ಟೆಯ ಮೇಲಿಟ್ಟುಕೊಂಡು ಹಾಳುಹೊಟ್ಟೆ ತುಂಬಿಕೊಳ್ಳಬೇಕಲ್ಲ ಎಂದು ಸೂಚಿಸಿದನು. ಆ ಸಂಕೇತವನ್ನು ನೋಡಿದ ಕೆಲವರಿಗೆ ಏನೋ ಸಂದೇಹ. ಸಂಜೆ ರಾಮಕೃಷ್ಣನ ಮನೆಗೆ ಹೋಗಿ ರಾಜಸಭೆಯ ಸನ್ನೆ ಏನೆಂದು ವಿಚಾರಿಸಿದರು. ರಾಮಕೃಷ್ಣನಿಗೆ ಇವರಿಗೇಕೆ ನನ್ನ ಮೇಲೆ ಸಂದೇಹ ಎಂದು ಅಚ್ಚರಿ. ಆದರೆ ತೋರಿಸಿಕೊಳ್ಳಲಿಲ್ಲ. ಬದಲಾಗಿ 'ಇದು ಬಹಳ ರಹಸ್ಯ ವಿಚಾರ. ಹೇಳಿದರೆ ನನಗೆ ಶಿಕ್ಷೆಯಾಗುತ್ತದೆ' ಎಂದನು. ಅವರೆಲ್ಲ ಮತ್ತೆ ಮತ್ತೆ ಪೀಡಿಸಲು, 'ನಿಮ್ಮ ಬಗ್ಗೆ ಯಾರೋ ದೂರುಕೊಟ್ಟಿದ್ದಾರೆ. ರಾಜರಿಗೆ ಸಂಶಯ ಬಂದು ಅದನ್ನು ವಿಚಾರಿಸುವಂತೆ ನನಗೆ ಹೇಳಿದ್ದಾರೆ ಆ ಕಾರಣ ನಾನು ಸಭೆಗೆ ಬಂದೊಡನೆ ಯಾರ್‍ಯಾರು ಹೇಗಿದ್ದಾರೆ ಎಂದು ಮುಖ್ಯ ಸಂಕೇತದಿಂದ ಕೇಳಿದರು. ನಾನು ಕೆಲವರ ನಡತೆ ಚೆನ್ನಾಗಿಲ್ಲವೆಂದು ಹೊಟ್ಟೆತೋರಿಸಿ ಹೇಳಿದೆನು' ಎಂದನು. ವಂಚಕರಾಗಿದ್ದ ಅವರು ತಾವು ಪಾರಾಗಲು ಲಂಚ ಕೊಡಲು ಸಿದ್ಧರಾದರು ಎಂದನು. ಅವರೆಲ್ಲರೂ ರಾಮಕೃಷ್ಣನಿಗೆ ಹೆಚ್ಚು ಹಣಕೊಟ್ಟು ತಮ್ಮನ್ನು ಉಳಿಸಬೇಕೆಂದು ಬೇಡಿಕೊಂಡರು.

ಆ ದಿನವೂ ರಾಜನು ಸುತ್ತಾಡುತ್ತಾ ರಾಮಕೃಷ್ಣನ ಮನೆಗೆ ಬಂದನು. ಹಣ ನೋಡಿ 'ಅದೇನು?' ಎಂದನು. ಬೆಳಿಗ್ಗೆ ನಮ್ಮಿಬ್ಬರ ಸನ್ನೆಯಿಂದ ಲಂಚಕೋರ ಜನ ಹೆದರಿ ಇದನ್ನು ತಂದು ಕೊಟ್ಟಿದ್ದಾರೆ ಎಂದನು. ರಾಜನು ಅವನ ಕೌಶಲ್ಯವನ್ನು ಮೆಚ್ಚಿ ಆ ಹಣವನ್ನು ಅವನಿಗೇ ಕೊಟ್ಟನು. ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆಯಾಯಿತು.

ತೆನಾಲಿ ರಾಮನು ಜಗಜಟ್ಟಿಯನ್ನು ಸೋಲಿಸಿದ್ದು

ಕೃಷ್ಣದೇವರಾಯನ ರಾಜ್ಯಕ್ಕೆ ಒಮ್ಮೆ ಬಲಭೀಮನೆಂಬ ಜಗಜಟ್ಟಿಯು ಬಂದನು. ರಾಜನ್ ನಿನ್ನ ರಾಜ್ಯದಲ್ಲಿ ಯಾರು ನನ್ನನ್ನು ಸೋಲಿಸುವರೋ ಅವರಿಗೆ ಶರಣಾಗುತ್ತೇನೆ. ಹಾಗೆ ಯಾರೂ ಇಲ್ಲವಾದರೆ ನನ್ನೆದುರು ಸೋಲೊಪ್ಪಿಕೊಳ್ಳಿ ಎಂದು ಸವಾಲು ಹಾಕಿದನು. ಅವನಿಗೆ ನಾಳೆ ಬರುವಂತೆ ತಿಳಿಸಿದ ರಾಜನು ಚಿಂತೆಗೊಳಗಾದನು. ಜಟ್ಟಿಗಳು ಅವನ ಬಲವಾದ ಮೈಕಟ್ಟನ್ನು ನೋಡಿ ಬೆದರಿದರು. ಇನ್ನು ತಮಗೆ ಸಾವೇ ಗತಿ. ನಮ್ಮನ್ನು ಗೆದ್ದ ಅವನಿಗೆ ಚಡ್ಡಿ ತೊಡಿಸಬೇಕಾಗುತ್ತದೆಂದು ಭಯಪಟ್ಟರು. ಅವರೆಲ್ಲ ಸೇರಿ ರಾಮಕೃಷ್ಣನ ಬಳಿಗೆ ಬಂದು ಏನಾದರೂ ಮಾಡುವಂತೆ ಕೇಳಿಕೊಂಡರು. ರಾಮನು ರಾಜ್ಯದ ಕೀರ್ತಿಯ ಬಗ್ಗೆ ಯೋಚಿಸತೊಡಗಿದರು. ಕೊನೆಗೆ 'ನಾನು ವೀರಬಹಾದ್ದೂರ್ ಎಂದು ಹೆಸರಿಟ್ಟುಕೊಳ್ಳುತ್ತೇನೆ. ನೀವೂ ನನ್ನನ್ನು ಹಾಗೇ ಕರೆಯಿರಿ. ಮುಂದಾಗುವುದನ್ನು ನಾನು ನೋಡಿಕೊಳ್ಳುತ್ತೇನೆ' ಎಂದು ಹೇಳಿದನು. ಅನಂತರ ಅವನು ಜಟ್ಟಿಯ ಬಿಡಾರದ ಎದುರಿಗೇ ತನ್ನ ಬಿಡಾರವನ್ನು ಹಾಕಿಸಿದನು. ಬಲಭೀಮನು ಅವನನ್ನು ಭೇಟಿಯಾಗಲು ಬಯಸಿದನು. ಆದರೆ ರಾಮಕೃಷ್ಣನು ನಾಳೆಯವರೆಗೆ ಯಾರನ್ನೂ ಭೇಟಿಯಾಗುವುದಿಲ್ಲವೆಂದು ಹೇಳಿ ಕಳುಹಿಸಿದನು.

ಮರುದಿನ ಕುಸ್ತಿ ನೋಡಲು ಬಹಳ ಜನ ಬಂದಿದ್ದರು. ಬಲಭೀಮನು ಕೊಬ್ಬಿದ ಆನೆಯಂತೆ ಕೂಗುತ್ತಾ ಕಣಕ್ಕೆ ಬಂದನು. ರಾಮಕೃಷ್ಣನು ಶಕ್ತಿಯಿಂದ ಆಗದುದನ್ನು ಯುಕ್ತಿಯಿಂದ ಮಾಡಬೇಕೆಂದು ಯೋಚಿಸುತ್ತಾ ಕಣಕ್ಕೆ ಬಂದನು. ಬಲಭೀಮನ ಕೈಯಲ್ಲಿ ವೀರಬಹಾದ್ದೂರನು ಸಾಯುತ್ತಾನೆಂದು ಜನರು ಮರುಗಿದರು. ವೀರಬಹಾದ್ದೂರನು ಬಲಭೀಮನ್ನು ಕುರಿತು "ಅಯ್ಯಾ, ಶಾಸ್ತ್ರ ಪ್ರಕಾರ ಕುಸ್ತಿ ಮಾಡುವೆಯೋ ಇಲ್ಲವೇ ಹುಂಬತನದಿಂದಲೋ ಎಂದನು. ಬಲಭೀಮನು ಶಾಸ್ತ್ರ ಪ್ರಕಾರದಿಂದ ಎಂದು ಉತ್ತರಿಸಿದನು. "ಹಾಗಾದರೆ ನಾನು ಕೆಲವು ಪಟ್ಟುಗಳನ್ನು ತೋರಿಸುತ್ತೇನೆ ಅವುಗಳ ಅರ್ಥವನ್ನು ಹೇಳಿದ ಮೇಲೆ ನನ್ನೊಡನೆ ಕುಸ್ತಿ ಮಾಡಬಹುದು. ಹೇಳದಿದ್ದರೆ ನೀನೇ ಸೋತಂತೆ "ಎಂದನು. ಬಲಭೀಮನು ಒಪ್ಪಿದನು.

ರಾಮಕೃಷ್ಣನು ಸುಳ್ಳು ಸುಳ್ಳೇ ಕೈಕಾಲುಗಳನ್ನು ತಿರುಗಿಸುತ್ತಾ, ಕಣ್ಣು ಕಣ್ಣು ಬಿಡುತ್ತಾ ಏನೇನೋ ಸನ್ನೆ ಮಾಡಿದನು. ಬಲಭೀಮನಿಗೆ ಅದೇನೆಂದು ತಿಳಿಯಲಿಲ್ಲ. ಅವನು ಮೂಕನಾದುದನ್ನು ಕಂಡ ರಾಮಕೃಷ್ಣನು "ಅಯ್ಯಾ, ಬಲಭೀಮ ನಿನಗೆ ಸರಿಯಾದ ವಿದ್ಯೆಯೇ ಇಲ್ಲ. ಇಷ್ಟೊಂದು ಬಿರುದುಗಳನ್ನು ನಿನಗೆ ಯಾರು ಕೊಟ್ಟರು? ಎಂದು ಕೇಳಿದನು. ರಾಜನು ವೀರಬಹಾದ್ದೂರನು ಗೆದ್ದನೆಂದು ಘೋಷಿಸಿದನು. ಬಲಭೀಮನು ಅಲ್ಲಿಂದ ಓಡಿಹೋದನು.

ಅನಂತರ ರಾಜನು ರಾಮಕೃಷ್ಣನನ್ನು ಅರಮನೆಗೆ ಕರೆಸಿದನು. "ಅಯ್ಯಾ, ವೀರ ಬಹದ್ದೂರನೇ ನಿನ್ನ ಪಟ್ಟುಗಳ ಅರ್ಥ. ನನಗೂ ತಿಳಿಯಲಿಲ್ಲ. ಏನೆಂದು ಹೇಳು" ಎಂದು ಕೇಳಿದನು. ರಾಮಕೃಷ್ಣನು ನಗುತ್ತಾ "ರಾಜನ್, ಅವುಗಳ ಅರ್ಥವಿದು. ಬಲಭೀಮ ನೀನು ಮುಷ್ಟಿಯಿಂದ ಒಂದೇಟು ಕೊಟ್ಟರೆ ನಾನು ಸಾಯುವುದು ಖಂಡಿತ. ಇನ್ನು ನನ್ನ ಹೆಂಡತಿ ಮಕ್ಕಳನ್ನು ದೇವರೇ ಕಾಪಾಡಬೇಕು. ಅವರು ಇಂದಿಗೆ ಅನಾಥರಾದರು ಎಂದು ಸೂಚಿಸಿದೆನು" ಎಂದನು. ರಾಮಕೃಷ್ಣನ ಬುದ್ಧಿವಂತಿಕೆಗೆ ರಾಜನು ಮೆಚ್ಚಿ ಹೊಟ್ಟೆ ಹುಣ್ಣಾಗುವಂತೆ ನಕ್ಕನು. ರಾಜ್ಯದ ಗೌರವವನ್ನು ಉಳಿಸಿದ ಅವನಿಗೆ ಬಹುಮಾನ ಕೊಟ್ಟನು.

ಹೀಗೆ ರಾಮಕೃಷ್ಣನು ಮಾಡಿದ ವಿನೋದಗಳೆಷ್ಟೋ ಲೆಕ್ಕವಿಲ್ಲ. ಈ ವಿನೋದಗಳಲ್ಲಿ ನಗಿಸುವುದು ಮಾತ್ರವೇ ಉದ್ದೇಶವಾಗಿ ಇರುತ್ತಿರಲಿಲ್ಲ. ಜೊತೆ ಜೊತೆಗೆ ಬುದ್ಧಿವಂತಿಕೆ, ನ್ಯಾಯ ಬುದ್ಧಿ, ರಾಜನನ್ನು ಎದುರಿಸುವ ಧೈರ್ಯ, ವಿವೇಕ, ಸಂದರ್ಭಕ್ಕೆ ತಕ್ಕ ಚುರುಕುತನ, ಉಪಾಯ, ದೇಹಬಲವಿಲ್ಲದಿದ್ದರೂ ಚತುರನಾಗಿದ್ದರೆ ಗೆಲ್ಲಬಹುದೆಂದು ಆತ್ಮ ವಿಶ್ವಾಸ, ಅಭಿಮಾನಗಳನ್ನು ಆ ವಿನೋದಗಳು ತೋರುತ್ತಿದ್ದವು. ಅಲ್ಲದೆ ಅವನಲ್ಲಿದ್ದ ಸ್ನೇಹಬುದ್ಧಿ, ರಾಜಭಕ್ತಿ, ದೇಶಭಕ್ತಿಗಳನ್ನೂ ಅವು ಮೆರೆಯುತ್ತಿದ್ದವು. ಹೀಗೆ ಜಾಣತನ, ವಿವೇಕ ಹಾಗೂ ಒಳ್ಳೆಯ ಉದ್ದೇಶಗಳಿಂದ ಕೂಡಿದ ವಿನೋದ ಬದುಕಿನ ದಾರಿಯನ್ನು ತೋರಿಸುತ್ತಾ ಮನಸ್ಸಿಗೆ ಸಂತೋಷವನ್ನೂ ಉಂಟುಮಾಡುತ್ತದೆ.

AKSHARA GRANTHALAYA
ACC.NO. 016220

843.6
ವರ್ಗೀಕರಣ ಸಂಖ್ಯೆ ....
...ಸಂಖ್ಯೆ 016220
16220

ಕನ್ನಡ ವಿ ... ನವಿ ಮಟ್ಟದವರೆಗೆ ಉತ್ತಮ ಹಾಗೂ ... ವಾಗಿ 'ಪಠ್ಯಪುಸ್ತಕ ರಚನಾ ವಿಭಾಗ' ... ಗಾಗಿ ಪಠ್ಯಪುಸ್ತಕ ರಚನೆ ಮಾಡಬೆ ... ಇಲಾಖೆ ನವಸಾಕ್ಷರರಿಗಾಗಿ ಪುಸ್ತಕ ... ದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ ... ಡಿನ ಪ್ರಖ್ಯಾತ ಲೇಖಕರನ್ನು, ಭಾಷಾತ ... ಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ... ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ... ಯು ಅನೇಕ ಸಲ ಚರ್ಚಿಸಿ ಯೋಜನ

ನವಸಾಕ್ಷ ... ಈಗಾಗಲೇ ಪ್ರಕಟವಾಗಿರುವ ಪುಸ್ತಕಗ ... ಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿ ... ನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು